4. ಮಾನವ ನೇತ್ರಗಳ (ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕ 1996:

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ, 1996ರ ಮಾನವ ನೇತ್ರಗಳ (ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ,

''1996ರ ಮಾನವ ನೇತ್ರಗಳ (ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೆ, 1996ರ ಮಾನವ ನೇತ್ರಗಳ (ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು) ಮತ್ತು ಇತರ ಕಾನೂನುಗಳ (ನಿರಸನ) ಕರ್ನಾಟಕ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - IV

12.50 ಪಿ.ಎಂ.

ಖಾಸಗಿ ಕಾರ್ಯಕಲಾಪ

ವಿಷಯ:- ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರುವುದು.

ಉಪಾಧ್ಯಕ್ಷರು:- ಈಗ ರಾಜ್ಯದಲ್ಲಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಈ ಸದನವು ನಿರ್ಣಯಿಸುತ್ತದೆ ಎಂಬ ನಿರ್ಣಯದ ಮೇಲೆ ಚರ್ಚೆಯನ್ನು ಶ್ರೀ ವಾಟಾಳ್ ನಾಗರಾಜ್‌ರವರು ಮುಂದುವರೆಸುವುದು.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೆ, ಪಾನ ನಿರೋಧ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಹೇಳಿ ಈ ಸದನ ತೀರ್ಮಾನಿಸಬೇಕೆಂದು ಹೇಳಿ ನಾನು ಏನು ಖಾಸಗಿ ನಿರ್ಣಯವನ್ನು ಮಂಡಿಸಿದ್ದೇನೆ, ಆ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನು ಆಡುವಾಗ ನನ್ನ ನಿರ್ಣಯ ಮತದಾನಕ್ಕೆ ಬಂದಾಗ ಅನೇಕ ಸ್ನೇಹಿತರು ಇದರಲ್ಲಿ ಮಾತನಾಡಿದ ಮೇಲೆ ಇದು ಮತದಾನಕ್ಕೆ ಬರುತ್ತದೆ. ಈ ಮತದಾನದಲ್ಲಿ ಆ ನಿರ್ಣಯ ಪರವಾಗಿ ಎಷ್ಟು ಜನ ಮತ ನೀಡುತ್ತಾರೆ, ಆ ನಿರ್ಣಯ ವಿರುದ್ಧವಾಗಿ ಎಷ್ಟು ಜನ ಮತ ನೀಡುತ್ತಾರೆ ಎನ್ನುವುದರ ಬಗ್ಗೆ ನನ್ನ ಮನಸ್ಸಿನಲ್ಲಿ ಅನೇಕ ವಿಚಾರಗಳಿವೆ. ನನಗನಿಸುತ್ತದೆ ಇದರಲ್ಲಿ ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು ಎನ್ನತಕ್ಕಂಥ ಆತ್ಮ, ಶಕ್ತಿ, ಸ್ಥೈರ್ಯ ಮತ್ತು ಪ್ರಾಮಾಣಿಕ ಚಿಂತನೆಯನ್ನು ಹೊಂದಿರುವವರು ಈ ಸದನದ ಎರಡು ಕಡೆಯ ಸದಸ್ಯರುಗಳಿದ್ದಾರೆ. ಮತ್ತು ಎಲ್ಲಾ ಪಕ್ಷದಲ್ಲಿಯೂ ಈ ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬಾರದು ಎಂದು ಹೇಳಿ ಪಕ್ಷ ಭೇದವನ್ನು ಮರೆತು ಎರಡು ಕಡೆಗಳಲ್ಲಿ ಇರುವವರೂ ಇದ್ದಾರೆ. ಇದು ಒಂದು ಮಹತ್ತರವಾದಂತಹ ಪಿಡುಗು. ಪಾನ ನಿರೋಧವನ್ನು ಸಮಗ್ರವಾಗಿ ಜಾರಿಗೆ ತರಬೇಕು ಎಂಬ ವಿಚಾರದಲ್ಲಿ ನಾನು ಬಹಳ ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡಿದ್ದೇನೆ. ಮತ್ತು ಈ ನಿರ್ಣಯವನ್ನು ತಂದಿರತಕ್ಕಂತಹ ನಾನು ಸ್ಪಷ್ಟವಾಗಿ ತಮಗೆ ಗೊತ್ತಿರುವ ಹಾಗೆ ನಾನು ಯಾವುದೇ ಮದ್ಯಪಾನವನ್ನು ಉಪಯೋಗಿಸುವುದಿಲ್ಲ. ಆ ಒಂದು ದೃಷ್ಟಿಯಲ್ಲಿ ಈ ನಿರ್ಣಯವನ್ನು ಇಲ್ಲಿ ತಂದಿದ್ದೇನೆ. ಈ ನಿರ್ಣಯಕ್ಕೆ ಬೆಂಬಲವನ್ನು ಕೊಡತಕ್ಕಂಥ ಅನೇಕ ಪ್ರಮುಖರು ಇಲ್ಲಿದ್ದಾರೆ. ಮತ್ತು ಕರ್ನಾಟಕ ರಾಜ್ಯದಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ಶ್ರೀಮಾನ್ ನಿಜಲಿಂಗಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಯಶೋಧರಮ್ಮ ದಾಸಪ್ಪನವರು ತಮ್ಮ ಸಚಿವ ಪದವಿಗೆ ರಾಜೀನಾಮೆಯನ್ನು ನೀಡಿದರು. ಅವರನ್ನು ಸಚಿವ ಸಂಪುಟದಲ್ಲಿ ಉಳಿಸಿಕೊಳ್ಳಬೇಕೆಂದು ಹೇಳಿ ನಿರಂತರವಾದಂತಹ ಪ್ರಯತ್ನ ನಡೆಯಿತು. ಯಶೋಧರಮ್ಮ ದಾಸಪ್ಪನವರು ಇಬ್ಬರೂ ಈ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದಂತಹ ಮಹಾನ್ ವ್ಯಕ್ತಿಗಳು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ತಮ್ಮ ಉದ್ದೇಶ ಏನೆಂದರೆ, ಈಗ ಏನು ಮಹಿಳಾ ಮಂತ್ರಿಗಳಿದ್ದಾರಲ್ಲಾ ಈ ಉದ್ದೇಶಕ್ಕಾಗಿ ರಾಜೀನಾಮೆಯನ್ನು ಕೊಡಬೇಕೆಂದು ತಾವು ಕೇಳುತ್ತಿದ್ದೀರಿ. ತಮ್ಮ ಅಭಿಪ್ರಾಯ ಏನು ಎಂದು ಕೇಳುತ್ತಿದ್ದೇನೆ. ನನಗೆ ಗೊತ್ತಿರುವ ಹಾಗೆ ಆಡಳಿತ ಪಕ್ಷದ ಕಡೆಯಲ್ಲಿರುವ ಎಲ್ಲಾ ಮಹಿಳಾ ಸದಸ್ಯರೂ ಕೂಡ ಇದರ ಬಗ್ಗೆ ಚುನಾವಣೆಯ ಮುಂದೆ ಬೆಂಬಲವನ್ನು ಕೊಟ್ಟಿದ್ದರು. ನಂತರ ಕೂಡ ಕೊಟ್ಟಿದ್ದರು ಮತ್ತು ಈಗಲೂ ಕೂಡ ಕೊಡುತ್ತಾರೆಂದು ನನ್ನ ಭಾವನೆ. ಒಂದು ಸಮಯ ಕೊಡದಿದ್ದರೆ ಅವರೆಲ್ಲರೂ ಕೂಡ ಈ ಪದವಿಯನ್ನು ತ್ಯಾಗ ಮಾಡಿ ಬರುವದಕ್ಕೆ ಸಿದ್ಧರಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಇದಕ್ಕೆ ತಮ್ಮಗಳ ಸಹಮತ ಇದೆ ಎಂದು ನನ್ನ ಅಭಿಪ್ರಾಯ.

+ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪ್ರಮೀಳಾ ನೇಸರ್ಗಿಯವರ ಬಗ್ಗೆ ಮತ್ತು ಇಲ್ಲಿರತಕ್ಕಂತಹ ಎಲ್ಲಾ ಮಹಿಳೆಯರ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ. ನನ್ನ ನಿರ್ಣಯಕ್ಕೆ ತಾವೆಲ್ಲರೂ ಬೆಂಬಲವನ್ನು ಕೊಡುತ್ತಿದ್ದೀರಿ. ಆತ್ಮಸಾಕ್ಷಿ ಮತದಾನಕ್ಕೆ ಇದನ್ನು ಕೊಡಬೇಕು, ಪಕ್ಷದ ಕಟ್ಟುಪಾಡು ಇದ್ದಾಗ ತಾವುಗಳು ಗೊಂದಲಕ್ಕೆ ಸಿಕ್ಕುತ್ತೀರಿ. ಆದರೆ ಆತ್ಮಸಾಕ್ಷಿ ಮತದಾನವನ್ನು ಕೊಟ್ಟಾಗ ನನ್ನ ನಿರ್ಣಯಕ್ಕೆ ಬಹುತೇಕ ಇಲ್ಲಿರತಕ್ಕಂತಹ ಎಲ್ಲಾ ಮಹಿಳೆಯರು ಬೆಂಬಲವನ್ನು ಕೊಡುತ್ತಾರೆ ಮತ್ತು ನಮ್ಮ ರಾಜ್ಯದ ಹಿರಿಯರು, ಈ ಶಾಸನ ಸಭೆಗೆ ಹಿರಿಯರಾದಂತಹ ಶ್ರೀಮಾನ್ ಗೋವಿಂದೇಗೌಡರು ಸಹ ಮುಂದೆ ಬಂದು ನಿಲ್ಲುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅವರನ್ನು ನೋಡಿದರೆ ಹಿಂದಿನ ಕಾಲದವರು ಮತ್ತು ಸ್ವಾತಂತ್ರ್ಯ ಹೋರಾಟವನ್ನು ನೋಡಿರತಕ್ಕಂಥವರು ಮತ್ತು ಹಿಂದಿನ ದಿನಗಳನ್ನು ಕಂಡಿರತಕ್ಕಂಥವರು. ಅವರೆಲ್ಲರೂ ಆತ್ಮಸಾಕ್ಷಿಯ ಮತದಾನಕ್ಕೆ ಬಂದಾಗ ಮತವನ್ನು ನೀಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈಗ ಯಶೋಧರಮ್ಮ ದಾಸಪ್ಪನವರು ಇಡೀ ಜೀವನವನ್ನು ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದಂತಹ ಒಬ್ಬ ವೀರ ಮಹಿಳೆ. ದಾಸಪ್ಪನವರು ಅಷ್ಟೇ ದಾಸಪ್ಪನವರ ಕಾಲದಲ್ಲಿ ಕೆ.ಟಿ.ಭಾಷ್ಯಂನವರು, ಕೆಂಗಲ್ ಹನುಮಂತಯ್ಯನವರು, ನಿಜಲಿಂಗಪ್ಪನವರು, ಟಿ.ಸುಬ್ರಮಣ್ಯಂನವರು ಅವರ ಇತಿಹಾಸವನ್ನು ತೆಗೆದುಕೊಂಡು ಹೋದಾಗ ಕರ್ನಾಟಕ ರಾಜ್ಯ ಅವರನ್ನು ಪಡೆದದ್ದೇ ಧನ್ಯ. ಕೋಲಾರ ಜಿಲ್ಲೆಯಲ್ಲಿ ಪಟ್ಟಾಭಿ ರಾಮನ್‌ನವರು ಆಮೇಲೆ ಚೆನ್ನಿಗರಾಮಯ್ಯನವರು ಇವರುಗಳದ್ದೆಲ್ಲ ಒಂದು ಇತಿಹಾಸ ಇದೆ. ಅದಕ್ಕೆ ಒಂದು ರೀತಿಯಲ್ಲಿ ಶಕ್ತಿ ಇದೆ.

(ಈ ಹಂತದಲ್ಲಿ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವರೆಲ್ಲರ ನೆನಪು ಇದೆ. ಆ ಸಂದರ್ಭದಲ್ಲಿ ಯಶೋಧರಮ್ಮ ದಾಸಪ್ಪನವರು ಎಷ್ಟು ಆದರ್ಶವಾಗಿ ನಿಜಲಿಂಗಪ್ಪನವರ ಹತ್ತಿರ ತಾವು ತಮ್ಮ ಸರ್ಕಾರದಲ್ಲಿ ಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುತ್ತೇವೆಂದು ಹೇಳಿದರೆ ಮಾತ್ರ ನಾನು ಮಂತ್ರಿ ಮಂಡಲದಲ್ಲಿರುತ್ತೇನೆ. ಇಲ್ಲ ಎಂದರೆ ನಾನು ಖಂಡಿತವಾಗಿ ಮಂತ್ರಿ ಮಂಡಲದಲ್ಲಿರುವುದಿಲ್ಲ ಎಂದು ಹೇಳಿ ಸ್ಪಷ್ಟವಾಗಿ ರಾಜೀನಾಮೆಯನ್ನು ಕೊಟ್ಟು ಮಂತ್ರಿ ಮಂಡಲದಿಂದ ಹೊರಗಡೆ ಹೋದರು. ಅದೇ ರೀತಿಯಲ್ಲಿ ಬಿ.ರಾಚಯ್ಯನವರು ಪಾನ ನಿರೋಧವನ್ನು ಸ್ಪಷ್ಟ ಅಭಿಪ್ರಾಯವನ್ನು ಕೇಳಿ ಕೊನೆಗೆ ಈ ಸರ್ಕಾರ ನನ್ನ ಕ್ಷೇತ್ರವಾದ ಯಳಂದೂರು ಕ್ಷೇತ್ರಕ್ಕೆ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೊಳಿಸತಕ್ಕಂತಹ ನೀತಿಗೆ ಒಳಪಡಿಸಿದರು. ಶ್ರೀಮಾನ್ ವೈ.ರಾಮಕೃಷ್ಣನವರು ಆ ಕಾಲದಲ್ಲಿ ಪಾನ ನಿರೋಧವನ್ನು ಸ್ಪಷ್ಟವಾಗಿ ವಿರೋಧಿಸಿ ತನ್ನ ತಾಲ್ಲೂಕಿನ ಪ್ರದೇಶದಲ್ಲಿ ಸಂಪೂರ್ಣವಾಗಿ ಪಾನ ನಿರೋಧವನ್ನು ತರಬೇಕೆಂದು ಹೇಳಿದಂಥವರು. ಒಂದು ಕಾಲದಲ್ಲಿ ಪಾನ

ನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ರಾಜಿನಾಮೆಯನ್ನು ಕೊಟ್ಟಂತಹ ಆದರ್ಶ ಹೆಗ್ಗಳಿಕೆ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಇವತ್ತು ಪಾನ ನಿರೋಧದಿಂದ ನಮಗೆ ರಾಜ್ಯಕ್ಕೆ ಸಮಾಜಕ್ಕೆ, ಪರಿಸರಕ್ಕೆ, ಮಾನವ ಕುಲಕ್ಕೆ ಎಷ್ಟು ಪ್ರಾಮಾಣಿಕ ಅನುಕೂಲವಾಗುತ್ತದೆ ಎನ್ನುವುದು ಬಹಳ ಮಹತ್ತರವಾದಂಥ ಲಾಭ. ಮತ್ತೊಂದು ಕಡೆ ಮದ್ಯಪಾನದಿಂದ ಸರ್ಕಾರದ ಖಜಾನೆಗೆ ಬರುವ ಹಣದ ಲೆಕ್ಕಚಾರ. ಸರ್ಕಾರದ ಖಜಾನೆಗೆ ಬರುವ ಹಣವನ್ನು ಮದ್ಯವನ್ನು ಮಾರಿ ಮದ್ಯ ಮಾರಾಟದಿಂದ ಬರುವ ತೆರಿಗೆಯ ಹಣದಿಂದ ನಾವು ಸಾರ್ವಜನಿಕರ....

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):- ಈ ವಿಷಯ ಇವತ್ತೇ ಮುಗಿಯುತ್ತದೆಯೋ ಅಥವಾ ಮುಂದುವರೆಯುತ್ತದೆಯೋ? ನಾನು ಭಾಗವಹಿಸಬೇಕೆಂದು ಇಚ್ಛೆ ಇದೆ.

ಅಧ್ಯಕ್ಷರು:- ಇದು ಮುಂದುವರೆಯುತ್ತಿದೆ. ಸ್ಟೇಜ್ ಬೈ ಸ್ಟೇಜ್ ಬರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಏನು ಈ ವಿಷಯದ ಮೇಲೆ ಮುಖ್ಯಮಂತ್ರಿಗಳು ವಾಕ್ ಔಟ್ ಮಾಡಿದರೆ ಹೇಗೆ? ಪಾನ ನಿರೋಧ ಜಾರಿಯಲ್ಲಿ ತರುತ್ತಾರೆ ಎಂದು ಬೇಜಾರು ಮಾಡಿಕೊಂಡು ಮುಖ್ಯಮಂತ್ರಿಗಳು ಏನಾದರೂ ವಾಕ್ ಔಟ್ ಮಾಡಿದರೋ ಏನೋ

ಅಧ್ಯಕ್ಷರು:- ಇಲ್ಲ. ಇದನ್ನು ಇನ್ನು ಜೀವಂತ ಇಡಿ. ಇದನ್ನು ತೆಗೆಯುವುದು ಬೇಡ. ನಾನು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಅನುಮತಿಯನ್ನು ಕೇಳಿ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಪ್ರಾಮಾಣಿಕವಾಗಿ ನಾವು ಇದನ್ನು ಚಿಂತನೆ ಮಾಡಬೇಕು. ಪಾನನಿರೋಧವನ್ನು ಸಮಗ್ರವಾಗಿ ಜಾರಿಗೆ ತರಬೇಕೆಂಬ ಬಗ್ಗೆ ಒಂದು ರಾಷ್ಟ್ರೀಯ ಚರ್ಚೆ ಆಗಬೇಕು. ಮಹಾತ್ಮ ಗಾಂಧಿಯವರನ್ನು ನೆನಸಿಕೊಂಡಾಗ ಬಹಳ ಜನ ಹೇಳುತ್ತಾರೆ, ಮಹಾತ್ಮ ಗಾಂಧಿಯವರನ್ನು ನೆನಸಿಕೊಳ್ಳುವುದು ಆ ಕಾಲಕ್ಕೆ ಆಯಿತು, ಈಗ ಕಾಲ ಬದಲಾಗಿದೆ ಎಂಬ ವಿಚಾರಗಳನ್ನು ಕೆಲವರು ಹೇಳಬಹುದು. ಆದರೆ ನಾವು ಈ ದೇಶದ ಸ್ವಾತಂತ್ರ್ಯವನ್ನು ಪಡೆದಂತಹ ದಿನಗಳನ್ನು ನೋಡಿದಾಗ ಈ ದೇಶದ ಒಂದು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿತಂತ ವ್ಯಕ್ತಿಗಳನ್ನು ನೆನೆದಾಗ ಸ್ವಾತಂತ್ರ್ಯ ಬೇಕು, ಆದರೆ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿಯವರು ಕೊಟ್ಟ ತತ್ವ ನೀತಿ, ಆಚರಣೆಗಳಿಗೆ ತಿಲಾಂಜಲಿ ನೀಡಿ ನಾವು ಆಡಳಿತವನ್ನು ನಡೆಸತಕ್ಕದ್ದು ಆತ್ಮದ್ರೋಹ, ಆತ್ಮವಂಚನೆ, ಈ ಆತ್ಮ ವಂಚನೆ ಮತ್ತು ಈ ಆತ್ಮದ್ರೋಹ ಮಾಡಿ ನಾವು...

ಅಧ್ಯಕ್ಷರು:- ಗಾಂಧೀಜಿಯವರು ಪಾನ ನಿಷೇಧದ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಮತ್ತೊಂದು ಕಡೆಗೆ ಅವರು ತಮ್ಮದೇ ಆದ ಆರ್ಥಿಕ ಸಿದ್ಧಾಂತವನ್ನು ಕೂಡ ಪ್ರತಿಪಾದನೆ ಮಾಡಿದ್ದಾರೆ. ಇವೆರಡರಲ್ಲಿ ನಿಮಗೆ ಯಾವುದು ಬಹಳ ಮುಖ್ಯ. ಗಾಂಧೀಜಿಯವರ ಆರ್ಥಿಕ ಸಿದ್ಧಾಂತವೋ ಅಥವಾ ಪಾನ ನಿಷೇಧವೋ? ಯಾವುದಕ್ಕೆ

ಮೊದಲ ಪ್ರಾಶಸ್ತ್ಯ ಕೊಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ನನ್ನದು ಪಾನ ನಿಷೇದ. ಆರ್ಥಿಕ ಸಿದ್ಧಾಂತ, ಆಗಾಗ್ಗೆ ಅದಕ್ಕೆ ರೂಪ ರೇಕ್ಗೆಗಳು ಬರುತ್ತವೆ; ಯಾವ ಯಾವ ರೀತಿಯಲ್ಲಿ ಅದಕ್ಕೆ ಚಾಲನೆ ಬರುತ್ತದೆ ಅದು ಒಂದು ರೀತಿ. ಆದರೆ ಪಾನ ನಿಷೇಧ ಏನಿದೆ ಇದರ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರು ಕೇಳಿದರು, ಪಾನ ನಿಷೇಧ ಮತ್ತು ಆರ್ಥಿಕ ಸಿದ್ಧಾಂತ ಇವೆರಡರಲ್ಲಿ ಯಾವುದಕ್ಕೆ ನಿಮ್ಮದು ಮೊದಲ ಪ್ರಾಶಸ್ತ್ಯ ಎಂದು. ಪಾನ ನಿಷೇಧ ಬಂದರೆ ಎಕಾನಮಿ ಆಟೋಮ್ಯಾಟಿಕ್ ಆಗಿ ಬರುತ್ತದೆ, ಅದೇ ಅವರ ಆರ್ಥಿಕ ಸಿದ್ಧಾಂತ. ಮೊದಲು ಪಾನ ನಿಷೇಧ ತೆಗೆದುಕೊಂಡು ಬನ್ನಿ; ಆಗ ಜನ ತಮ್ಮ ಕಾಲ ಮೇಲೆ ತಾವೇ ನಿಂತುಕೊಂಡು ಅರ್ನ್ ಮಾಡುವುದಕ್ಕಾಗುತ್ತದೆಂದು ಹೇಳಿದ್ದಾರೆ. ಅವಕಾಶ ಬಂದಾಗ ವಿವರವಾಗಿ ಹೇಳುತ್ತೇನೆ.

ಅಧ್ಯಕ್ಷರು:- ಗಾಂಧೀಜಿಯವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ.

ಶ್ರೀ ಜಿ.ಬಿ.ಶಿವಕುಮಾರ್:- ಪಾನನಿರೋಧ ಅಂದ್ರಲ್ಲ, ಈ ದೇಶಕ್ಕೆ ಪಾನಕ್ಕಿಂತ ಹೆಚ್ಚಾಗಿ ನಿರೋಧ ತಂದರೆ ಒಳ್ಳೆಯದೆಂದು ಬಹಳ ಜನರ ಅಭಿಪ್ರಾಯ. ಇವತ್ತು ಜನಸಂಖ್ಯೆ ನಿಯಂತ್ರಣಕ್ಕೆ ಆ ಚರ್ಚೆ ಬಂದಾಗ ಅದು ಬಂತು. ಅದಕ್ಕೆ ವಾಟಾಳ್ ನಾಗರಾಜು ಅವರಿಗೆ ಪ್ರೇರಕವಾಗುತ್ತದೆಂದು ಮಧ್ಯೆ ಪ್ರವೇಶ ಮಾಡಿದೆ.

ಶ್ರೀ ಅಧ್ಯಕ್ಷರು:- ಒಳ್ಳೆಯ ಸಲಹೆ.

ಶ್ರೀ ಎಂ.ಪಿ.ಪ್ರಕಾಶ್:- ತಾವು ಗಾಂಧೀಜಿಯವರ ಆರ್ಥಿಕ ಸಿದ್ಧಾಂತದ ಬಗ್ಗೆ ಪ್ರಸ್ತಾಪ ಮಾಡಿದಿರಿ. ಅದು ನೇರವಾಗಿ ಇದಕ್ಕೆ ಸಂಬಂಧಪಟ್ಟ ಹಾಗೆ ಇದೆ. ಶ್ರೀ ಜೆ.ಸಿ. ಕುಮಾರಪ್ಪನವರು ಅದರ ಬಗ್ಗೆ ಸಂಪೂರ್ಣವಾದ ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಾಣ ಮಾಡಿ ಕೊಡುತ್ತಾರೆ. ಅವರಲ್ಲಿ ಈ ಸರಕು ಸಂಸ್ಕೃತಿ, ಮಾರಾಟ ಸಂಸ್ಕೃತಿ, ಕನ್ಸ್ಯೂಮರ್ ಇಕಾನಮಿ ಎನ್ನುವುದು ಏನಿದೆ ಅದನ್ನು ಸಂಪೂರ್ಣ ನಿರಾಕರಿಸದಿದ್ದರೂ ಕೂಡ ಅದರ ಬಗ್ಗೆ ಹೆಚ್ಚು ಬೇಕುಗಳು ಇಲ್ಲದಂತಹ ಮತ್ತು ಯಾವುದನ್ನು ತಾವೇ ಉತ್ಪಾದಿಸುವುದಕ್ಕೆ ಸಾಧ್ಯವಾಗುವುತ್ತದೆ ಆ ಉತ್ಪಾದನೆಯನ್ನು ಆದಷ್ಟು ಮಟ್ಟಿಗೆ ವಿತರಣೆಯಲ್ಲಿಯೂ ಕೂಡ ವ್ಯವಸ್ಥೆ ಮಾಡತಕ್ಕ ಒಂದು ಸಮಾಜ, ಅದನ್ನು ಅವರು ಗ್ರಾಮೀಣ ಭಾರತ ಎಂದು ಕರೆಯುತ್ತಿದ್ದರು. ಅದಕ್ಕೆ ಗುಡಿ ಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಡತಕ್ಕದ್ದು ಮತ್ತು ಅದರ ಮೂಲಕ ಪರಸ್ಪರ ಹೊಂದಾಣಿಕೆ ಮೂಲಕ ಬದುಕುವಂಥ ಒಂದು ಸಾಮಾಜಿಕ ಚೌಕಟ್ಟನ್ನು ನಿರ್ಮಾಣ ಮಾಡಿದ್ದರು. ಪಾನ ನಿಷೇಧಕ್ಕೆ ತಾವು ಏನು ಒಂದು ಥಳಕು ಹಾಕಿದ್ದೀರಿ ಅದು ಬಹಳ ಸೂಕ್ಷ್ಮವಾದ ವಿಚಾರ ಇದೆ. ಅದನ್ನು ನಂತರ ಬೇಕಾದರೆ ಪ್ರಸ್ತಾಪ ಮಾಡಿ ಹೇಳುವುದಾದರೆ ಹೇಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಶಿವಕುಮಾರ್ ಅವರು ಹೇಳಿದ್ದುದು ನಿಜ, ಅವರ ವಾದದಲ್ಲಿ ಅರ್ಥ ಇದೆ. ಪಾನ ಬೇರೆ, ನಿರೋಧ ಬೇರೆ ಅದು ಆಗಬೇಕು. ನಾನು ಹೇಳುತ್ತೇನೆ, ಒಂದು ಮಗು ಸಾಕು ಎನ್ನುವ ಸಿದ್ಧಾಂತ ಏನಿದೆ, ತತ್ವ ಏನಿದೆ ಅದು ಈಗ ಇಡೀ ದೇಶಾದ್ಯಂತ ಒಂದು ದೊಡ್ಡ ಅಲೆಯಾಗಿ ಹೋಗುತ್ತಿದೆ, ಅದಕ್ಕೆ ನಾವು ಅಂಟಿಕೊಳ್ಳಬೇಕಾಗುತ್ತದೆ. ಈ ದೇಶ ಉಳಿಯಬೇಕಾದರೆ ಮಕ್ಕಳ ಸಂಖ್ಯೆ ಕಡಿಮೆಯಾಗಲೇಬೇಕು. ಮಕ್ಕಳ ಸಂಖ್ಯೆ ಕಡಿಮೆಯಾಗಬೇಕಾದರೆ ವಿಧಾನಗಳು ಆಗಬೇಕು. ಆ ವಿಧಾನಗಳಲ್ಲಿ ಇದು ಒಂದು. ಆದುದರಿಂದ ಮಕ್ಕಳ ಸಂಖ್ಯೆ ಕಡಿಮೆಯಾಗಬೇಕೆಂಬುದರಲ್ಲಿ ನಾನು ಅತ್ಯಂತ ಪ್ರಾಮಾಣಿಕವಾಗಿ ಒಪ್ಪುತ್ತೇನೆ. ಆದರೆ ಆಡಳಿತ ನಡೆಸತಕ್ಕವರು ಎಷ್ಟು ಜನ ಇದನ್ನು ಜಾರಿಗೆ ತಂದಿದ್ದಾರೆ? ಇದು ಆಡಳಿತದಿಂದ ಶುರುವಾಗಬೇಕು. ನಾನು ಜಾರಿಗೆ ತಂದಿದ್ದೇನೆ, ಎರಡೇ ಮಕ್ಕಳು, ಒಂದು ಗಂಡು ಒಂದು ಹೆಣ್ಣು. ನಾನು ಆ ರೀತಿ ಹುಚ್ಚುಹುಚ್ಚಾಗಿ ಜಾರಿಗೆ ತರದೆ ಇರತಕ್ಕದ್ದನ್ನು ತಂದಿದ್ದೇನೆಂದು ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ನಾವೇನು ತನಿಖೆ ಏರ್ಪಾಡು ಮಾಡುವುದಿಲ್ಲ ಬಿಡಿ.

ಶ್ರೀ ವಾಟಾಳ್ ನಾಗರಾಜ್:- ಬೇರೆಯವರ ಬಗ್ಗೆ ನೀವು ಏನು ತನಿಖೆ ಮಾಡಿದರೂ ನಿಮಗೆ ಸಾಕ್ಷ್ಯಾಧಾರಗಳು ಸಿಗುತ್ತವೆ, ಕೆಲವು ನನ್ನ ಸ್ನೇಹಿತರುಗಳ ಬಗ್ಗೆ. ಆದರೆ ನನ್ನ ಬಗ್ಗೆ ನಿಮಗೆ ಏನೂ ಸಿಗುವುದಿಲ್ಲ.

ಅಧ್ಯಕ್ಷರು:- ಕೆಲವು ಸ್ನೇಹಿತರುಗಳ ಬಗ್ಗೆ ಎಂದು ಹೇಳಿ ನೀವು ಹಾಗೆ ಕೈ ತೋರಿಸಿದರೆ, ಯಾರು ಮೊಯಿಲಿಯವರೆ, ಧರ್ಮಸಿಂಗರೆ, ಖರ್ಗೆಯವರೆ, ಶಿವಪ್ಪನವರೆ, ನಂಜೇಗೌಡರೆ, ರಾಮಕೃಷ್ಣ ಅವರೆ? ಆ ಕಡೆ ತೋರಿಸಿ ಸರಿಯಾಗಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಏಕೆ ನೀವು ಮಾತು ಎತ್ತಿದರೆ ನಂಜೇಗೌಡರು, ನಂಜೇಗೌಡರು ಎಂದು ಹೇಳುತ್ತೀರಿ?

ಅಧ್ಯಕ್ಷರು:- ನಾನು ಹೇಳಲಿಲ್ಲ. ನಿಮ್ಮ ಕೈ ಆ ಕಡೆ ತಿರುಗಿಸಿ ಸಾರಾಸಗಟಾಗಿ ತೋರಿಸಬೇಡಿ, ಖಚಿತವಾದ ನಿರ್ದಿಷ್ಟವಾದ ಆರೋಪ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:- ನಿರ್ದಿಷ್ಟವಾಗಿ ನಂಜೇಗೌಡರದು ಹೇಳಿ ಎಂದು ಹೇಳುವುದಕ್ಕೆ ಹೋಗಬೇಡಿ. ನಾನು ಅವರ ಬಗ್ಗೆ ಏತಕ್ಕೆ ಹೇಳಲಿ. ಕೆಲವು ಗುಟ್ಟಾದ ವಿಚಾರಗಳನ್ನು ತಾವು ಬಹಿರಂಗಕ್ಕೆ ತರುವುದು ಬೇಡ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- 1967ರಿಂದ ಅಣ್ಣತಮ್ಮಂದಿರ ಹಾಗೆ ಒಟ್ಟಿಗೆ ಇದ್ದೀರಿ. ನಿಮ್ಮಿಬ್ಬರ ಮಧ್ಯೆ ಆ ರೀತಿ ಭಿನ್ನಾಭಿಪ್ರಾಯ ತರುವುದಿಲ್ಲ. ಇಬ್ಬರನ್ನು ಒಂದೇ ರೀತಿಯಾಗಿ ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವೂ ನಮಗೆ ಆಪ್ತ ಸ್ನೇಹಿತರು. ಅದಕ್ಕೆ ನಾವೆಲ್ಲ ಒಟ್ಟಿಗೆ ಗುಟ್ಟಾಗಿ ಮಾತನಾಡಿಕೊಳ್ಳೋಣ, ಇಂಥ ವಿಚಾರ ಬೇಡಿ ಎಂದು ಹೇಳಿದ್ದು. ಅಷ್ಟೆಲ್ಲ ಕೆಲವು ವಿಚಾರಗಳು ಬಯಲಾಗಬಾರದು. ಆದುದರಿಂದ, ಪ್ರಕಾಶ್ ಆವರೆ, ನಿಮ್ಮ ಬಗ್ಗೆ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:- ಅವರದ್ದು ಏನೋ ಗುಟ್ಟು ಇದ್ದ ಹಾಗೆ ಇದೆಯಲ್ಲ!

ಶ್ರೀ ಎಂ.ಪಿ.ಪ್ರಕಾಶ್:- ಮಾನವ ಸಹಜವಾದ ದೌರ್ಬಲ್ಯಗಳು ಇರುತ್ತವೆ, ನಾವು ಅದಕ್ಕೆ ಅತೀತರಲ್ಲ.

ಶ್ರೀ ವಾಟಾಳ್ ನಾಗರಾಜ್:- ಒಬ್ಬರಾದರೂ ಸತ್ಯ ಹೇಳಿದರು, ಅದಕ್ಕೆ ನಾನು ಅವರನ್ನು ಮೆಚ್ಚುತ್ತೇನೆ, ಸಂತೋಷ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿನ್ನೆಯಿಂದ ಎಲ್ಲರೂ ಎಕ್ಸೈಜ್ ಗುಂಗಿನಲ್ಲಿದ್ದಾರೆ. ಈ ಸಬ್ಜಕ್ಟ್ ಇವತ್ತು ಸ್ವಲ್ಪ ಪೋಸ್ಟ್‌ಪೋನ್ ಮಾಡಿ ಇನ್ನೊಂದು ಶುಕ್ರವಾರಕ್ಕೆ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ನಿನ್ನೆಯೂ ಇದರ ಮೇಲೆ ಚರ್ಚೆಯಾಯಿತು, ಅದೇ ಇಂಟಾಕ್ಸಿಕೇಷನ್ ಸಾಕಾಗಿದೆ ಎಲ್ಲರಿಗೂ. ಪುನಃ ಮತ್ತೆ ಇವತ್ತು ಮುಂದುವರಿಸಿದರೆ ಸೋಮವಾರದವರೆಗೆ ಯಾರೂ ಏಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ಒಂದು ಹಾಸ್ಯದ ಹೊನಲು ಏಳತಕ್ಕದ್ದು, ಚರ್ಚೆ ಸಂದರ್ಭದಲ್ಲಿ ಇದೆಲ್ಲ ಸಾಮಾನ್ಯ, ಮಧ್ಯ ಭಾಗವಹಿಸತಕ್ಕದ್ದು ಮಾಡತಕ್ಕದ್ದು. ಆದರೆ ಪಾನ ನಿರೋಧ ಸಮಗ್ರವಾಗಿ ಜಾರಿಗೆ ತರಬೇಕೆಂಬ ಚಿಂತನೆ ಇರತಕ್ಕವರು ಈ ದೇಶದಲ್ಲಿ ಬಹಳ ಜನರಿದ್ದಾರೆ, ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಕರ್ನಾಟಕದಲ್ಲಿ ಇದರ ಬಗ್ಗೆ ಒಂದು ಕೂಗು ತೀವ್ರವಾಗಿ ಎದ್ದಿದೆ. ತಮಗೆ ಹೇಳುವುದಾದರೆ ಕೆಲವು ಮಠಾಧಿಪತಿಗಳು, ಈಗಾಗಲೇ ಅವರು ಅನೇಕ ಕಡೆ ತಾವೇ ಮೆರವಣಿಗೆ ಮಾಡಲು ಹೊರಟಿದ್ದಾರೆ. ಈ ಸೂಚನೆ ಏನಿದೆ ಇದು ಒಳ್ಳೆಯ ಸೂಚನೆ. ಆದರೆ ಇದರ ಬಗ್ಗೆ ಪ್ರಾಮಾಣಿಕತೆ ಎಷ್ಟು ಎಂಬ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ.

ಅಧ್ಯಕ್ಷರು:- ನಿಶ ಅಥವಾ ನಿಶೆ ಎಂದು ಏನು ಹೇಳುತ್ತಾರೆ ಇದು ಹೆಂಡ ಅಥವಾ ಮತ್ತೆ ಯಾವುದಾದರೂ ಮಾದಕ ಪದಾರ್ಥಗಳ ಸೇವನೆಯಿಂದಲೇ ಬರಬೇಕಾಗಿಲ್ಲ. ನಿಶೆ ಅಂದರೆ ಅದರ ಅರ್ಥ ಮಾನಸಿಕ ಸಮತೋಲನವನ್ನು ಕಳೆದುಕೊಳ್ಳತಕ್ಕದ್ದು. ಅದು ಜಾತೀಯತೆಯಿಂದ ಆಗಬಹುದು, ಮತ್ತೆ ಯಾವುದೇ ಬೇರೆ ವಿಚಾರಗಳಲ್ಲಿ ಮನುಷ್ಯ ಮಾನಸಿಕ ಸಮತೋಲನವನ್ನು ಕಳೆದುಕೊಳ್ಳತಕ್ಕದ್ದು ಸಾಧ್ಯತೆ ಇದೆ. ಮಠಾಧಿಪತಿಗಳು ಎಂದು ಸಾರಾಸಗಟಾಗಿ ಎಲ್ಲರ ಮೇಲೆ ಹೇಳುವುದಿಲ್ಲ. ಅವರು ಆಚರಣೆಯಲ್ಲಿ ತರತಕ್ಕ ಕೆಲವು ಪದ್ಧತಿಗಳು ಅಥವಾ ಅವರು ಪ್ರತಿಪಾದನೆ ಮಾಡತಕ್ಕ ಕೆಲವು ವಿಚಾರಗಳು ಕೂಡ ನಿಶಾದಿಂದ ಕೂಡಿರತಕ್ಕದ್ದೇ. ನಾವು ಬರೀ ಪಾನ ನಿಷೇಧ ಮಾಡುವುದರಿಂದ ಸಮಾಜ ಸುಧಾರಿಸುತ್ತದೆಂಬುದನ್ನು ನಾನು ಒಪ್ಪುವುದಿಲ್ಲ. ಮನುಷ್ಯ ಮಾನಸಿಕ

ಸಮತೋಲನವನ್ನು ಕಳೆದುಕೊಳ್ಳದೆ ಇರತಕ್ಕ ಎಲ್ಲರನ್ನು ಸರಿ ಸಮಾನವಾಗಿ ಕಾಣತಕ್ಕ ಒಂದು ಪರಿಸರ ಸೃಷ್ಟಿ ಮಾಡತಕ್ಕದ್ದು ಬಹಳ ಅಗತ್ಯ. ಆದುದರಿಂದ ಈ ನಿಷೇಧಕ್ಕೆ ಯಾರು ಕರೆ ಕೊಡುತ್ತಾರೆ ಎನ್ನತಕ್ಕವರ ಹಿನ್ನೆಲೆಯನ್ನೂ ಕೂಡ ನಾವು ಬಹಳ ಎಚ್ಚರಿಕೆಯಿಂದ ಅವಲೋಕನ ಮಾಡಬೇಕಾಗುತ್ತದೆ.

SRI M.P.PRAKASH:- Religion is full of opium...

MR.SPEAKER:- I am just providing clue, the rest I leave it to you..

ಶ್ರೀ ವಾಟಾಳ್ ನಾಗರಾಜ್:- ಒಪ್ಪುತ್ತೇನೆ, ನಿಮ್ಮ ವಾದವನ್ನು ನೂರಕ್ಕೆ ನೂರು ಸಮರ್ಥನೆ ಮಾಡುತ್ತೇನೆ.

MR.SPEAKER:- Hittler was a teetottaller. The rest I leave to your intelligence.

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ಸಚಿವರು ಹೇಳಿದ್ದುದು religion is full of opium. When opium becomes religion of the people,

SRI. M.P.PRAKASH:- That has happened during the time of former Chinese Prime Minister...

SRI S.SURESHKUMAR:- Today younger generation in various colleges consuming opium, therefore opium has become the religion. That is unfortunate.

MR.SPEAKER:- Vis-a-vis the inference is intoxication. The nervous system could get intoxicated not just with the consumption of liquor. It could happen by so many other methods also. It could be religion; it could be language, it could be caste; it could be money; it could be power; it could be anything. Intoxication is that which causes imbalance of the central nervous system of the man. That is, the man would not be able to see the society; see the surrounding with a dispassionate view; with an unbiased view. He would lose the proper sight of the situation that is existing around him. So, that is what

is intoxiation. It could cause by the consumption of any of these things.

ಶ್ರೀ ವಾಟಾಳ್ ನಾಗರಾಜ್:- ನಾನು ಒಪ್ಪುತ್ತೇನೆ. ಏಕೆಂದರೆ ಈ ಮತ್ತು ಅನೇಕ ವಿಧದಲ್ಲಿದೆ.

ಅಧ್ಯಕ್ಷರು:- ಅಮಲು. ಅಧಿಕಾರದಲ್ಲಿರುವವರಿಗೆ ಬಹಳ ಜನ ನಿಂಬೆ ಹಣ್ಣು ಕೊಡುತ್ತಾರೆ. ಏತಕ್ಕೆ ಗೊತ್ತೆ? ಅಧಿಕಾರದಿಂದ ಅಮಲು ಬರುತ್ತದೆ. ಅಮಲು ಅಂದರೆ ಪಿತ್ತ. ಪಿತ್ತ ಹೆಚ್ಚಾದಾಗ ಏನಾಗುತ್ತದೆಂದರೆ ಕಣ್ಣು ಮಂಪರಾಗುತ್ತದೆ. ನಿಂಬೆಹಣ್ಣಿನಲ್ಲಿ ಒಂದು ರಸ ಇರುತ್ತದೆ. ಅದನ್ನು ಸ್ವಲ್ಪ ಕಣ್ಣಿಗಿಟ್ಟುಕೊಂಡರೆ ಆ ಮತ್ತು ಇಳಿಯುತ್ತದೆ. ದೃಷ್ಟಿ ಚೆನ್ನಾಗಿ ಕಾಣುತ್ತದೆ. ಅಧಿಕಾರದ ಅಮಲಿನಲ್ಲಿ ಇರತಕ್ಕಂಥವರಿಗೆ ನೆತ್ತಿಗೇರಿರತಕ್ಕ ಪಿತ್ತ ಕಡಿಮೆಯಾಗಲೀ ಎಂದು ನಿಂಬೆಹಣ್ಣು ಕೊಡತಕ್ಕಂಥದ್ದು. ಬಹಳ ಜನರಿಗೆ ಗೊತ್ತಿಲ್ಲ. ಹಾಗಾದರೆ ಬೇರೆ ಕಾಯಿ ಏತಕ್ಕೆ ಕೊಡಬಾರದು? ನಿಂಬೆ ಹಣ್ಣನ್ನೇ ಏತಕ್ಕೆ ಕೊಡುತ್ತಿದ್ದರು? ಇದರ ಅರ್ಥ ಇದೇ. ಬಹಳ ಜನ ಅದನ್ನು ಮರೆತುಬಿಟ್ಟಿದ್ದಾರೆ. ಎಲ್ಲಾ ಜೇಬಿಗೆ ಹಾಕಿಕೊಂಡು ಹೋಗಿ ಉಪ್ಪಿನಕಾಯಿ ಹಾಕುವುದಕ್ಕೆ ಕೊಡುತ್ತಾರೆ, ಹಾಗಲ್ಲ. ನಿಂಬೆಹಣ್ಣು ಕೊಡುವ ಉದ್ದೇಶವೇ ನೆತ್ತಿಗೇರಿರತಕ್ಕ ಪಿತ್ತ ಕಡಿಮೆಯಾಗಬೇಕು ಅಂತ ಹೇಳಿ. ಪಿತ್ತ, ಈ ನಿಷ ಏನಿದೆ ಇದು ಅನೇಕ ಕಾರಣಗಳಿಂದ ಬರುತ್ತದೆ. ಅವೆಲ್ಲಾ ನಿಷೇಧ ಆಗಬೇಕು ಇದರ ಜೊತೆಗೆ.

ಶ್ರೀ ಎಚ್.ಎಸ್.ನಂಜೇಗೌಡ:- ಬೇರೆ ಕಾರಣಗಳಿಂದ ಬರುವ ಪಿತ್ತ ನೆತ್ತಿಗೇರುವುದು ಹೋಲಿಸಿಕೊಂಡರೆ ಪಾನದಿಂದ ಬರುವುದು ಬಹಳ ಕಡಿಮೆ.

ಅಧ್ಯಕ್ಷರು:- ನೀವು ಹೇಳುವುದು ಬಹಳ ಸರಿ. ಸತ್ಯ ಅದು. ಪಾನ ಬಳಕೆಗೆ ಅವರು ಸಮರ್ಥನೆ ಮಾಡಿಕೊಂಡರು ಅಂತ ಅಲ್ಲ. ಸತ್ಯ ಕೂಡ ಅದು. ಬೇಕಾದರೆ ವಿಶ್ಲೇಷಣೆ ಮಾಡಿ. ಅದಕ್ಕೇ ನಾನು ಹೇಳಿದ್ದುದು. ಹಿಟ್ಲರ್ ಮದ್ಯ ಸೇವನೆ ಮಾಡುತ್ತಾ ಇರಲಿಲ್ಲ. ಆದರೆ ಮಾನವ ಕೋಟಿಗೆ ವಿಶ್ವದ ಇತಿಹಾಸದ ಅವಲೋಕನ ಮಾಡಿದಾಗ ಹಿಟ್ಲರ್‌ನಿಂದ ಆದ ಅನಾಹುತ, ಆಘಾತ ಮತ್ತೆ ಬೇರೆ ಇನ್ನೊಬ್ಬ ಮನುಷ್ಯನಿಂದ ಆಗುತ್ತದೆಯೋ ಇಲ್ಲವೊ ಹೇಳುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್:- ಎಷ್ಟೋ ಸಾರಿ ನಾನು ಗಂಡುಸು ಎನ್ನುವುದೇ ಅಮಲು ಕೆಲವರಿಗೆ. ನಾನು ಹೆಂಗಸು ಎನ್ನುವುದೇ ಅಮಲು ಕೆಲವರಿಗೆ. ಈ ತರಹದಕ್ಕೆ ಮದ್ದೇ ಇಲ್ಲವೇನೋ ಅನ್ನಿಸುತ್ತದೆ. ಅದೂ ಕೂಡ ಒಂದು ರೀತಿಯ ಅಮಲು.

ಅಧ್ಯಕ್ಷರು:- ಮತ್ತೆ ಕೆಲವರಿಗೆ ನಾನು ಬಲಸ್ಥ, ನಾನು ಈ ಜಾತಿಯಲ್ಲಿ ಹುಟ್ಟಿದ್ದೇನೆ, ನಾನು ಬಹಳ ಸುಂದರವಾಗಿದ್ದೇನೆ ಈ ತರಹ ಅಮಲು. ಅನೇಕ ರೀತಿಯ ಅಮಲುಗಳು.

ಶ್ರೀಮತಿ ಪ್ರಮೀಳ ನೇಸರ್ಗಿ:- ಅದರಿಂದ ಸಮಾಜದ ಮೇಲೆ ಏನೂ

ತೊಂದರೆಯಾಗುವುದಿಲ್ಲ. ಒಂದು ಪರಿಸರದ ಸಂಸಾರಕ್ಕೆ ಹಾಳಾಗತಕ್ಕದ್ದು ಅದು. ಮನೆಯಲ್ಲಿ ಕುಟುಂಬಕ್ಕೆ, ಮಕ್ಕಳಿಗೆ, ಹೆಂಡತಿಗೆ, ಆರ್ಥಿಕವಾಗಿ ಆಗತಕ್ಕಂಥ ಅನುಭವ ಈ ಪಾನದಲ್ಲಿ ಏನು ಬರುತ್ತದೆ ಅದು ಬೇರೆಯವರಿಂದ ಆಗುವುದಿಲ್ಲ. ಅದಕೋಸ್ಕರ ಈ ಪಾನ ನಿಷೇಧ ಮಾಡಬೇಕು ಎಂದು ಪ್ರತಿಪಾದನೆ ಮಾಡುತ್ತಿರುವುದು.

ಅಧ್ಯಕ್ಷರು:- ಒಬ್ಬ ವೈದ್ಯ, ಒಬ್ಬ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡತಕ್ಕಂಥ ಅಧ್ಯಾಪಕ, ಅಥವಾ ನ್ಯಾಯವನ್ನು ಉಚ್ಚಾರ ಮಾಡಬೇಕಾದ ಒಬ್ಬ ನ್ಯಾಯಾಧೀಶ ಅಥವಾ ಅಧಿಕಾರವನ್ನು ಹಿಡಿದಿರತಕ್ಕಂಥ ಒಬ್ಬ ಮಂತ್ರಿ, ಇವರು ಪಾನ ನಿಷೇಧದ ವಿಚಾರದಲ್ಲಿ ಬಹಳ ಬದ್ಧತೆಯಿಂದ ಇದ್ದು ಬೇರೆ ಯಾವುದಾದರೂ ವಿಚಾರಗಳಲ್ಲಿ ಅವರಿಗೆ ನಿಷೆ ಏರಿದ್ದರೆ ಜಾತಿಯ ಕಾರಣವೋ ಮತದ ಕಾರಣವೋ ಹಣದ ಕಾರಣವೋ ಅಧಿಕಾರದ ಕಾರಣವೋ ಅವರು ಅನ್ಯಾಯವನ್ನು ಮಾಡಿದರೆ ಆಗ ಸಮಾಜಕ್ಕೆ ನಷ್ಟ ಆಗುವುದಿಲ್ಲವೇ? ಪರಿಸರದ ಮೇಲೆ ಆಗುವುದಿಲ್ಲವೆ?

ಶ್ರೀಮತಿ ಪ್ರಮೀಳ ನೇಸರ್ಗಿ:- ಅದು ಅಧಿಕಾರದ ಮದ. ಪವರ್ ಎನ್ನುವುದು ಹೈಯೆಸ್ಟ್ ಇಂಟಾಕ್ಸಿಕೇಷನ್.

MR.SPEAKER:- What about caste? What about religion? What about language?

ಶ್ರೀಮತಿ ಪ್ರಮೀಳ ನೇಸರ್ಗಿ:- ಎಲ್ಲಾ ಇದೆ. ಆದರೆ ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಪ್ರತಿಪಾದನೆ ಮಾಡುತ್ತಿದ್ದಾರೆ ಈ ಸಬ್ಜೆಕ್ಟನ್ನು ಹೊರತುಪಡಿಸಿ ಆ ಅಧಿಕಾರದ ಮದದ ಬಗ್ಗೆ ಬೇರೆ ವಿಚಾರ ಮಾಡೋಣ. ಅದೇನು ನಿಷೆ ಕೊಡುತ್ತದೆ? ಯಾವ ಪಕ್ಷದವರಿಗೆ ಏನು ಕೊಡುತ್ತದೆ? ಯಾವ ರೀತಿ ಕೊಡುತ್ತದೆ? ಅದನ್ನೆಲ್ಲಾ ಬೇರೆ ವಿಚಾರ ಮಾಡೋಣ ಅಧ್ಯಕ್ಷರೆ. ಆದರೆ ಈಗ ಕೇವಲ ಪಾನನಿರೋಧದಿಂದ ಸಂಸಾರದ ಮೇಲೆ, ಹೆಣ್ಣುಮಕ್ಕಳ ಮೇಲೆ ಏನು ಪರಿಣಾಮ ಆಗುತ್ತಾ ಇದೆ ಆರ್ಥಿಕವಾಗಿ ಅವರು ಏನು ಕಷ್ಟಪಡುತ್ತಿದ್ದಾರೆ ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು:- ಈಗ ನಾನು ಸುಮ್ಮನೆ ಕೂಡುತ್ತೇನೆ. ಹೀಟ್ ಜನರೇಟ್ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಈ ಸದನದ ಮುಖಂಡರಾದ ಶ್ರೀಮಾನ್ ಜೆ.ಹೆಚ್.ಪಟೇಲ್ ಅವರು ಹೇಳಿದ್ದಾರೆ. ಈ ಪ್ರೊಹಿಬಿಷನ್ ಬಗ್ಗೆ ಆಗಲೀ, ಎಕ್ಸೈಜ್ ವಿಷಯದಲ್ಲಾಗಲೀ ಮಾತನಾಡಬೇಕಾದರೆ ಅನುಭವದ ಆಧಾರದ ಮೇಲೆ ಮಾತನಾಡಬೇಕೇ ಹೊರತಾಗಿ ಅನುಭವದ ಆಧಾರ

ಇಟ್ಟುಕೊಳ್ಳದಿದ್ದರೆ, ಅನುಭವ ಇಲ್ಲದೇ ಇದ್ದರೆ ಮಾತನಾಡುವುದಕ್ಕೆ ಹೋಗಬಾರದು ಎನ್ನುವ ಆದೇಶವನ್ನು ಸಭಾನಾಯಕರು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಇದರ ಮೇಲೆ ತಮ್ಮ ರೂಲಿಂಗ್ ಕೇಳುತ್ತಿದ್ದೇನೆ. ಸದನದ ನಾಯಕರು ಈ ರೀತಿಯಾಗಿ ಹೇಳಿದ ಮೇಲೆ ಪ್ರಮೀಳ ಅವರಾಗಲೀ, ವಾಟಾಳ್ ನಾಗರಾಜ್ ಅವರಾಗಲೀ ಇದರ ಬಗ್ಗೆ ಯಾವ ರೀತಿಯಿಂದ ಹಕ್ಕು ಇವರಿಗೆ ಹುಟ್ಟುತ್ತದೆ ಎಂಬ ಬಗ್ಗೆ ತಾವು ಹೇಳಿ, ಮುಂದೆ ನಾವು ಚರ್ಚೆಯನ್ನು ಮತ್ತೆ ಪ್ರಾರಂಭ ಮಾಡೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ತಾವು ತೀರ್ಪುಕೊಡುವುದಕ್ಕಿಂತ ಮುಂಚೆ ಅಧ್ಯಕ್ಷರೆ....

ಅಧ್ಯಕ್ಷರು:- ಶಿವಶಂಕರಪ್ಪನವರು ಏನೋ ಹೇಳುತ್ತಾರೆ.

ಶ್ರೀ ಎಸ್.ಶಿವಶಂಕರಪ್ಪ:- ಈ ವಿಚಾರವಾಗಿ ಮಾತನಾಡಬೇಕಾದರೆ ಯಾರೇ ಸದಸ್ಯರಾದರೂ ಕೂಡ ಆತ್ಮಸಾಕ್ಷಿಯಿಂದ ಮಾತನಾಡಿದರೆ ಬಹಳ ವಿಚಾರಗಳು ಹೊರಹೊಮ್ಮಬಹುದು. ನಾವು ಸುಮ್ಮನೆ ಪಾರ್ಟಿಯಿಂದ ಮಾತನಾಡುತ್ತೇವೆ. ಹರಾಜು ಹಾಕಬಾರದು, ಶರಾಬು ಬೇಡ, ವಿಸ್ಕಿ ಬೇಡ ಎಂದು ಹೇಳುವುದರ ಬದಲು ಪ್ರತಿಯೊಬ್ಬ ಸದಸ್ಯರಿಗೂ ಆತ್ಮಸಾಕ್ಷಿಯಾಗಿ ನೀವು ಮಾತನಾಡಿ ಎಂದು ಹೇಳಿದರೆ ಯಾರು ಯಾರು ಯಾವ ಯಾವ ಅಭಿಪ್ರಾಯ ಕೊಡುತ್ತಾರೆ ಎಂಬುದು ಬಹಳ ಚೆನ್ನಾಗಿ ಬರಬಹುದು ಎಂದು ಕಾಣುತ್ತದೆ.

ಅಧ್ಯಕ್ಷರು:- ಆತ್ಮಸಾಕ್ಷಿಯಾಗಿ ಏತಕ್ಕೆ ಮಾತನಾಡಬೇಕು? ಅವರು ಎದ್ದು ಮಾತನಾಡುವಾಗ ನಿಮಗೆ ಅಂದಾಜಿರುವುದಿಲ್ಲವೇ?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಪುಸ್ತಕ ಓದುವವರೂ ಅಷ್ಟೇ ಅಭಿಮಾನಿಗಳು, ಪುಸ್ತಕ ಬರೆಯುವವರು ಮಾತ್ರ ಅಲ್ಲ. ಓದುವವರೇ ಇಲ್ಲದಿದ್ದರೆ ಬರೆಯುವವರು ಏನು ಮಾಡುತ್ತಾರೆ? ಪ್ರೇಕ್ಷಕರೇ ಇಲ್ಲದಿದ್ದರೆ ಸಿನಿಮಾ ಅಥವಾ ನಾಟಕ ನೋಡುವುದಕ್ಕಾಗುವುದಿಲ್ಲ. ಅಂದರೆ ಅದರ ಬಗ್ಗೆ ಅಭಿಪ್ರಾಯವನ್ನೇ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ನೀವು ನಾಟಕ ಮಾಡಿಲ್ಲ ಅಥವಾ ಸಿನಿಮಾದಲ್ಲಿ ನೀವು ನಟಿಸಿಲ್ಲ, ಆದ್ದರಿಂದ ಸಿನಿಮಾ ಬಗ್ಗೆ ಕ್ರಿಟಿಸೈಸ್ ಮಾಡುವುದಕ್ಕೆ ಬರುವುದಿಲ್ಲ ಎಂದು ಅಲ್ಲ. ಪ್ರೇಕ್ಷಕರೂ ಅಷ್ಟೇ, ಓದುವವರು ಬರೆಯುವವರು ಎರಡೂ ಒಂದೇ. ಸನ್ಮಾನ್ಯ ಖರ್ಗೆಯವರು, ಇದರ ಬಗ್ಗೆ ತಮ್ಮ ಹಳ್ಳಿಯಲ್ಲಿ ಆಗಿದೆ ಎಂದು ತಿಳಿದುಕೊಂಡಿದ್ದೇನೆ. ಲಂಬಾಣಿ ತಾಂಡಾದಲ್ಲಿ, ಹೋಗತಕ್ಕ ಸುತ್ತಮುತ್ತ ಹಳ್ಳಿಗಳಲ್ಲಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ಹೇಳಿ. ತಾಂಡಾ ಅದೆಲ್ಲಾ ನೋಡೋಣ. ಲೀಡರ್ ಆಫ್ ಹೌಸ್ ಹೇಳಿದ್ದಾರೆ. ಅದಕ್ಕಾಗಿ ರೂಲಿಂಗ್ ಕೊಟ್ಟರೆ ಮುಂದಿನ ಚರ್ಚೆಗೆ ಹೋಗೋಣ. ಎಲ್ಲಾ ಬಿಟ್ಟು ತಾಂಡಾಕ್ಕೆ ಏತಕ್ಕೆ ಹೋದಿರಿ?

MR.SPEAKER:- I have an obligation. ಪ್ರಕಾಶ್ ಅವರು ಏನೋ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ತಮ್ಮ ಇಡೀ ಒಟ್ಟು ಮಾತಿನ ಅರ್ಥ ಇಷ್ಟೆ. ಮಾರ್ಸಿಸಿಸ್ ಕಾಂಪ್ಲೆಕ್ಸ್ ಇರತಕ್ಕದ್ದು ಅಪಾಯ ಎಂದು. ಸ್ವಪ್ರೇಮ, ಸ್ವಸುಂದರ ಆರಾಧನೆ, ಅದರಲ್ಲೂ ಹೆಣ್ಣುಮಕ್ಕಳಿಗಂತೂ ಬರಲೇಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ದಯವಿಟ್ಟು ಆ ಮಾತು ಹಿಂದಕ್ಕೆ ತೆಗೆದುಕೊಳ್ಳಬೇಕು. ಇವತ್ತು ಬೆಳಗ್ಗೆ ಎದ್ದು ವಿಧಾನಸೌಧಕ್ಕೆ ಬಂದರೆ ನೀವು ನೋಡಬಹುದು. ಮೆಟ್ಟಲು ಹತ್ತಿ ಬರುವುದಕ್ಕೆ ಮುಂಚೆ ಬಾಚಣಿಗೆ ಇಟ್ಟುಕೊಂಡಿರುತ್ತಾರೆ. ತಲೆ ಬಾಚಿಕೊಂಡು ಒಳಗೆ ಬರುತ್ತಾರೆ.

ಅಧ್ಯಕ್ಷರು:- ಅದರಲ್ಲೂ ನಾಣಯ್ಯ ಜಾಲಪ್ಪನವರಂಥವರಿಗೆ ಜಾಸ್ತಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸ್ವಪ್ರೇಮ ನಮಗಿಲ್ಲ. ಅದು ಇರತಕ್ಕದ್ದು ಮಹನೀಯರಿಗೆ. ಅದು ಹೇಗೆ ಅನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಎಂದು ನಾನು ಅಂದುಕೊಂಡಿದ್ದೇನೆ.

ಅಧ್ಯಕ್ಷರು:- ಈಗ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಸಾಧುವಾದ ಕ್ರಿಯಾಲೋಪವನ್ನು ಎತ್ತಿದ್ದಾರೆ. ಕ್ರಿಯಾಲೋಪದಲ್ಲಿ ಸಾಕಷ್ಟು ಶಕ್ತಿ ಇರುವುದಾದರೂ ಕೂಡ ಸದಸ್ಯರಿಗೆ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಕೊಡಬೇಕಾಗಿದೆ. ಆದರೆ ಸದನದ ಹಿತದೃಷ್ಟಿಯಿಂದ ಅನುಭವಶಾಲಿಗಳು ಯಾರಿದ್ದಾರೆ ಖರ್ಗೆಯಂಥವರು ಪಟೇಲರಂಥವರು ಅವರ ವ್ಯಾಖ್ಯಾನವನ್ನೂ ಕೂಡ ಪಡೆದುಕೊಳ್ಳುತ್ತೇವೆ. ಸದನಕ್ಕೆ ವಂಚನೆ ಮಾಡುವುದಿಲ್ಲ ಎನ್ನತಕ್ಕಂಥ ಆಶ್ವಾಸನೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ಖರ್ಗೆಯವರ ಬಗ್ಗೆ ಒಂದು ಬೆಳಕನ್ನು ಚೆಲ್ಲಿದಿರಿ. ನನಗೆ ಇದುವರೆಗೆ ಗೊತ್ತಿರಲಿಲ್ಲ. (ನಗು)

ಅಧ್ಯಕ್ಷರು:- ಇಲ್ಲ. ಸೀಮಿತ ವಲಯದಲ್ಲಿ.

ಶ್ರೀ ವಾಟಾಳ್ ನಾಗರಾಜ್:- ನಿಜವಾಗಿ ನನಗೆ ಅವರ ಬಗ್ಗೆ ಬಹಳ ...

ಅಧ್ಯಕ್ಷರು:- ಅಪಾರ, ಅಪಾರ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು:- ಬಾಚಣಿಗೆಯಲ್ಲೇ ಇದ್ದಾರೆ. ಅವರು ಹೇಳಿದರಲ್ಲ ಬಾಚಣಿಗೆ ಅಂತ. ಬಾಚಣಿಗೆ ಸಾಮಾನ್ಯವಾಗಿ ಕೂದಲಿದ್ದವರು ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ಕೂದಲಿಲ್ಲದೇ ಇದ್ದವರಿಗೇ ಬಾಚಣಿಗೆ ಕಡೆ ಗಮನ ಜಾಸ್ತಿ. ನಾಣಯ್ಯನವರು,

ಜಾಲಪ್ಪನವರು. ಜಾಲಪ್ಪನವರು ಈಗ ಪಾರ್ಲಿಮೆಂಟಿಗೆ ಹೋದರು ಬಿಡಿ.

ಶ್ರೀ ಎಂ.ಸಿ.ನಾಣಯ್ಯ:- ಈಗ ಅವರು ಎತ್ತಿರತಕ್ಕ ವಿಚಾರದಲ್ಲಿ a thing of beauty is a joy for ever. But, where do you see the beauty and how do you see the beauty is different. It is in the eyes of of the beholder. But, I think beauty is there and it is to be enjoyed; how do you enjoy it and how do you look at it; it is through your eyes. You do that or I do that; it is one and the same. Ultimately, it is the beauty that is to be enjoyed.

01-20 ಪಿ.ಎಂ.

ಶ್ರೀಮತಿ ಪ್ರಮೀಳನೇಸರ್ಗಿ:- ಕೆಲವರಿಗೆ ಕಾಡಿನಲ್ಲಿ ಹೋಗುತ್ತಿರತಕ್ಕ ಕೋತಿ ಕೂಡ ಸುಂದರವಾಗಿ ಕಾಣಬಹುದು. ಇಲ್ಲವೆಂದು ಹೇಳಲಿಲ್ಲ. ಕೆಲವರಿಗೆ ಇದು ಇರುತ್ತದೆ, ಗಾನಾಶರ್ ಎಂದು ಹೇಳುತ್ತಾರೆ ಬ್ಯೂಟಿ ಅನ್ನುವುದು ಹೇಗಿರಬೇಕು ಎನ್ನುವುದನ್ನು ಹೇಳುತ್ತಾರೆ. ಈ ಸದನ ಕೂಡ ಎಷ್ಟು ಸುಂದರವಾಗಿಡಬೇಕೆಂದು ದಿವಂಗತ ಕೆಂಗಲ್ ಹನುಮಂತಯ್ಯನವರು ಏನೊಂದು ದೂರದೃಷ್ಟಿಯನ್ನು ಇಟ್ಟುಕೊಂಡು ಇದನ್ನು ಮಾಡಿದರು, ಎಷ್ಟು ಸುಂದರವಾಗಿದೆಯೆಂದು ಎಲ್ಲರೂ ಬಂದು ನೋಡುತ್ತಾರೆ. ಅದನ್ನು ಬಿಟ್ಟು, ಈ ಸದನವನ್ನು ಸೌಂದರ್ಯವಾಗಿ ಕಟ್ಟದಿದ್ದರೆ ಇದನ್ನು ನೋಡುವುದಕ್ಕೆ ಯಾರೂ ಬರುತ್ತಿರಲಿಲ್ಲ. ಆದ್ದರಿಂದ ನೋಡುವ ದೃಷ್ಟಿಯ ಮೇಲೆ ಹೋಗುತ್ತದೆ. ನೋಡತಕ್ಕ ಮನೋದೃಷ್ಟಿಯ ಮೇಲೆ ಹೋಗುತ್ತದೆ. ಲಾರ್ಡ್ ಬೆನ್ಹಾನ್ ಹೇಳಿದರು, ಅದು ಇದೆ ಅದಕ್ಕೋಸ್ಕರನೇ ಹೇಳಿದ್ದುದು. ಯಾರ್ಯಾರು ಯಾವ ತರಹ ನೋಡುತ್ತಾರೆ ಅಂತ ಹೇಳಿದ್ದುದು.

ಅಧ್ಯಕ್ಷರು:- ಏನು ಮಾನ್ಯ ರಮಾನಾಥ್‌ರೈರವರು ಎಕ್ಸೈಜ್ ಮಿನಿಸ್ಟರ್ ಆಗಿದ್ದವರು ಏನು ಹೇಳುತ್ತೀರಿ ಹೇಳಿ.

ಶ್ರೀ ರಮಾನಾಥ್‌ರೈ:- ಏನೂ ಇಲ್ಲ ಸಾರ್, ಈ ಸದನದಲ್ಲಿ ನಾವು ಎಲ್ಲರೆ ತಲೆಯನ್ನು ಕಂಡಿದ್ದೇವೆ, ಆದರೆ ವಾಟಾಳ್ ನಾಗರಾಜ್‌ರವರ ತಲೆ ಏನೆಂದು ನಮಗೆ ಗೊತ್ತಿಲ್ಲ ಎಂದು ಕೇಳುತ್ತೇನೆ.

ಅಧ್ಯಕ್ಷರು:- ನೋಡಿ ಮಾನ್ಯ ಮೊಯಿಲಿಯವರು ಎಷ್ಟು ಬುದ್ಧಿವಂತರು ಅಂದರೆ ಎಲ್ಲರಿಗೂ ಅನುಮಾನ. ಏಕೆ ಅಷ್ಟು ಜನ ಇದ್ದರೂ ರಮಾನಾಥ್‌ರೈರವರನ್ನು ಮಂತ್ರಿ ಮಾಡುವುದಕ್ಕೆ ಆರಿಸಿಕೊಂಡಿದ್ದರು ಅಂತ. ಅವರು ಎಂತಹ ಬುದ್ಧಿವಂತರು, ಅವರನ್ನು ಆರಿಸಿದವರು ಇವರು ಎಂತಹ ಬುದ್ಧಿವಂತರು ಎಂದು ಈಗ ನಮಗೆ ಗೊತ್ತಾಯಿತು. 1967ನೇ ಇಸವಿಯಿಂದ ಯಾರೂ ಈ ಪ್ರಶ್ನೆಯನ್ನು ಕೇಳಿರಲಿಲ್ಲ. ಇವತ್ತು ಇವರು

ಕೇಳಿದರು ನೋಡಿ.

ಶ್ರೀ ವಾಟಾಳ್‌ನಾಗರಾಜ್:- ಈಗ ಇವತ್ತು ತಲೆ ತೋರಿಸಿಯೆಂದು ಹೇಳುತ್ತೀರಿ. ನಾಳೆ ಇನ್ನೇನೋ ತೋರಿಸಿಯೆಂದು ಹೇಳುತ್ತೀರಿ ಸಾಧ್ಯವೆ? ನೀವು ಹೇಳಿದಮೇಲೆ ನಾನು ತೋರಿಸದೇ ಇಲ್ಲಿ ಕುಳಿತುಕೊಂಡು ಬಿಟ್ಟರೆ ನನ್ನ ಪರಿಸ್ಥಿತಿಯೇನು? ಈ ಸದನದ ಪರಿಸ್ಥಿತಿ ಏನು?

ಅಧ್ಯಕ್ಷರು:- ಇಲ್ಲ.

ಶ್ರೀ ವಾಟಾಳ್‌ನಾಗಾರಾಜ್:- ಅದಕ್ಕೋಸ್ಕರ ಸದನ ಸ್ವಲ್ಪ ಗಾಂಭೀರ್ಯವಾಗಿರಬೇಕೆಂದರೆ, ನೀವು ಹೇಳಿದ್ದೆಲ್ಲ ತೋರಿಸುವ ಸದನವಾಗಬಾರದು. ತಾವು ಇದು ಹಾಸ್ಯವಾಗಿ ಮಾತನಾಡಿದ್ದರೂ ನಿಮ್ಮ ಮಾತಿನಲ್ಲಿ ಬಹಳ ತೂಕವಾದಂತಹ ಅರ್ಥವಿದೆ. ನಿಶೆ, ನಿಶಾ ನಾನಾ ವಿಧದಲ್ಲಿದೆ. ಆದರೆ ಮದ್ಯಪಾನ ಮಾಡಿದ ಮೇಲೆ ಏರತಕ್ಕ ನಿಶಾ ಅದರ ಪರಿಣಾಮ, ಅದರಿಂದಾಗತಕ್ಕ ಅನಾಹುತ ಬೇರೆ. ಆದರೆ ಮನುಷ್ಯನಿಗೆ ಅನೇಕ ರೀತಿಯ ಮತ್ತುಗಳು ಏನಿವೆ, ಅಮಲುಗಳು ಏನಿದೆ, ನಿಶಾ ಏನಿದೆ ಅದರ ರೂಪವೇ ಬೇರೆ. ನಿಜ, ಈಗ ನಾವು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ಚಳುವಳಿಯನ್ನು ಮಾಡುವುದಕ್ಕೆ ಅನೇಕ ಸಾಧು ಸಂತರು ಬಂದಿದ್ದಾರೆ. ಅವರಲ್ಲೂ ಅನೇಕ ಮತ್ತುಗಳು ನಿಶಾಗಳು ಇರತಕ್ಕದ್ದು ಇದೆ. ಅದು ಬೇರೆ ಬೇರೆ ದೃಷ್ಟಿಯಲ್ಲಿ ಇರುತ್ತದೆ. ಅವರ ದೃಷ್ಟಿಯನ್ನು ಚರ್ಚೆ ಮಾಡುವುದಕ್ಕೆ ಹೋದಾಗ, ಒಂದೊಂದು ಸಾರಿ ಆ ಬಗೆಗೆ ಮುಕ್ತ ಚರ್ಚೆಯನ್ನು ಮಾಡಲಿಕ್ಕೆ ಹೋದಾಗ ನಾವು ಒಂದು ರೀತಿಯ ಅಪಾಯಕ್ಕೆ ಸಿಕ್ಕುತ್ತೇವೆ.

ಶ್ರೀಮತಿ ಪ್ರಮೀಳನೇಸರ್ಗಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಬರೀ ಸಾಧು ಸಂತರ ಬಗ್ಗೆ ಮಾತನಾಡುತ್ತಾರೆ ಇದಲ್ಲ. ಇಡೀ ಮಹಿಳಾ ಕುಲ ಇವತ್ತು ಇಡೀ ದೇಶದಲ್ಲಿ ಜಾಗರೂಕರಾಗಿದ್ದಾರೆ. ಅವರೇ ಕೈಗೆ ಎತ್ತಿಕೊಂಡಿದ್ದಾರೆ. ಆದ್ದರಿಂದ ಸಾಧು ಸಂತರೇ ಮಾಡುತ್ತಿದ್ದಾರೆಂದು ಹೇಳತಕ್ಕದ್ದಲ್ಲ, ಕರ್ನಾಟಕದಲ್ಲಿ ಮಾನ್ಯ ಲೀಲಾದೇವಿ ಪ್ರಸಾದ್‌ರವರು ಇಲ್ಲ; ಅವರೂ ಕೂಡ ಅವರ ಹಳ್ಳಿಯಲ್ಲಿ ಕೋಲಾರ ಜಿಲ್ಲೆಯಲ್ಲಿ ಮತ್ತು ಎಲ್ಲಾ ಕಡೆ ಮಹಿಳೆಯರು ಇವತ್ತು ಇದನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಕೇವಲ ಸಾಧು ಸಂತರೇ ಮಾಡುತ್ತಿದ್ದಾರೆ ಅನ್ನತಕ್ಕ ಪ್ರಶ್ನೆಯಲ್ಲ. ತಾವು ಮಹಿಳೆಯರು ಮಾಡಿರತಕ್ಕ ಆಂಧೋಳನಗಳನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕು.

ಶ್ರೀ ವಾಟಾಳ್‌ನಾಗರಾಜ್:- ಮಹಿಳೆಯರು ಈ ವಿಚಾರದಲ್ಲಿ ಅವರೇ ನಿಲ್ಲಬೇಕು. ಪ್ರಾಮಾಣಿಕವಾಗಿ ಈ ದೇಶದಲ್ಲಿ ಪಾನನಿರೋಧ ಜಾರಿಗೆ ತರಬೇಕೆಂದು ಹೇಳಿ ಬೀದಿಗೆ ಮಹಿಳೆಯರೇ ಬರಬೇಕು. ಕುಡುಕ ಗಂಡನನ್ನು ಮದುವೆಯಾಗುವುದಿಲ್ಲವೆನ್ನತಕ್ಕ ಒಂದು ತೀವ್ರ ಚಳುವಳಿಯನ್ನು ಮಾಡಬೇಕು.

ಶ್ರೀ ಹೆಚ್.ಎನ್.ನಂಜೇಗೌಡ:- ಹೇಗೆ ಗಂಡನನ್ನು ಮದುವೆಯಾಗುವುದು?

ಶ್ರೀ ಜೆ.ಬಿ.ಶಿವಕುಮಾರ್:- ಕೊನೆಗೆ ಎಲ್ಲಿಗೆ ಬಂದರು ಅಂದರೆ, ಕೊನೆಗೆ ಎಲ್ಲೂ ಗಂಡೇ ಸಿಗುವುದಿಲ್ಲ.

ಶ್ರೀಮತಿ ಪ್ರಮೀಳನೇಸರ್ಗಿ:- ಸಿಕ್ಕದಿದ್ದರೂ ಚಿಂತೆಯಿಲ್ಲ. ಕುಡುಕ ಗಂಡನ ಸಹವಾಸ ಖಂಡಿತಾ ಬೇಕಾಗಿಲ್ಲ.

ಶ್ರೀ ಜೆ.ಬಿ.ಶಿವಕುಮಾರ್:- ಅಂಧಕಾರಕ್ಕೆ ತೆಗೆದುಕೊಂಡು ಹೋಗಿ ಬಿಡಬೇಡಿ. ನಿಮ್ಮದೆಲ್ಲ ಮುಗಿದು ಹೋಯಿತು ಎಂದು ಮುಂದಿನವರಿಗೆ ಏಕೆ ಇಷ್ಟೊಂದು ತೊಂದರೆ ಮಾಡುತ್ತೀರಿ?

ಅಧ್ಯಕ್ಷರು:- ಬೆಂಗಳೂರು, ಕಲ್ಕತ್ತ, ಮದ್ರಾಸ ಇಂತಹ ದೊಡ್ಡ ದೊಡ್ಡ ನಗರಗಳಲ್ಲಿ ಕ್ಲಬ್‌ಗಳಲ್ಲಿರುತ್ತವಲ್ಲ ಅಲ್ಲಿ ಕೆಲವು ಮಹಿಳೆಯರೂ ಕುಡಿಯುತ್ತಾರೆಂದು ಕಾಣುತ್ತದೆ. ನನಗೆ ಗೊತ್ತಿಲ್ಲ.

ಶ್ರೀ ಕೃಷ್ಣಪ್ಪ:- ಅಲ್ಲೇ ಅಲ್ಲ, ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶಗಳಿಗೆ ಮತ್ತೆ ಬೇರೆ ಕಡೆ ಹೋದರೆ ಮಹಿಳೆಯರು ಕುಡಿಯುವುದರಲ್ಲಿ 50ಪರ್ಸೆಂಟ್ ಇದ್ದಾರೆ.

+ ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಪ್ರಶ್ನೆ ಬಹಳ ಖಂಡಿತವಾದುದು. ಹೆಂಗಸರು ಇವತ್ತಿನ ದಿವಸ ಕುಡಿಯುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಬೆಂಗಳೂರಿನಲ್ಲಿ ತಾವು ಹೇಳಿದ್ದೀರಿ. ಫೈವ್‌ಸ್ಟಾರ್ಸ್ ಹೋಟಲ್‌ಗಳಲ್ಲಿ ಇವತ್ತಿನ ದಿವಸ ಅದೇ ಹೆಣ್ಣುಮಕ್ಕಳ ಜೊತೆಯಲ್ಲಿ ಟೇಬಲ್‌ಗೆ ಯಾರು ಮಹಿಳೆಯರು ಸಪ್ಲೈ ಮಾಡುತ್ತಾರಲ್ಲ ಅವರೇ ಜೊತೆಯಲ್ಲಿ ಕುಳಿತುಕೊಳ್ಳುತ್ತಾರೆ. ಬಹಳ ದುಃಖಕರವಾದ ಸಂಗತಿ ತಮಗೆ ಹೇಳಬೇಕೆಂದರೆ, ಅಂತಹ ಹೋಟೆಲ್‌ಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಏನು ಟೇಬಲ್‌ಗಳಿಗೆ ಸಪ್ಲೈ ಮಾಡುತ್ತಾರೆ ಅವರು ಜೊತೆಯಲ್ಲಿ ಕುಳಿತುಕೊಳ್ಳುತ್ತಾರೆ ಅವರು ಕುಡಿಯಬಹುದು ಇಲ್ಲದಿದ್ದರೆ ಕೆಲವರು ಫಾಂಟಾ ಇಟ್ಟುಕೊಂಡು ಕುಡಿಯುತ್ತಾರೆ. ಬಿಲ್ ಕೊಡುವಾಗ ಅದು ಬಾಟಲಿ ಕೊಟ್ಟಿದ್ದೇವೆಂದು ಹೇಳಿ ಇವತ್ತು ಹೋಟೆಲ್‌ನವರು ಬಿಲ್‌ಗಳನ್ನು ಸಪ್ಲೈ ಮಾಡುತ್ತಿದ್ದಾರೆ. ಕುಡುಕರ ಹತ್ತಿರ ಆ ಬಿಲ್ಲುಗಳನ್ನು ಇವತ್ತು ವಸೂಲಿ ಮಾಡುತ್ತಿದ್ದಾರೆ. ಈಗ ಬೆಂಗಳೂರಿನಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತಿದೆ. ಅಂತಹ ಹೋಟೆಲ್‌ಗಳ ಪಟ್ಟಿ ಕೂಡ ನನ್ನ ಹತ್ತಿರ ಇದೆ. ನಿನ್ನೆ ನಾನು ಈ ವಿಷಯದ ಬಗ್ಗೆ ಮಾತನಾಡಿದ್ದೆ. ಇದರ ಬಗ್ಗೆ ದಯವಿಟ್ಟು ಎಕ್ಸೈಜ್ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದರೂ ಕೂಡ ಅದರ ಬಗ್ಗೆ ಏನೂ ಪರಿಣಾಮವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಇನ್ನೊಂದು ಬಹಳ ದುಃಖ ತರತಕ್ಕ ವಿಷಯವೆಂದು ಹೇಳಿದರೆ, there are some bars, 5 star hotels, where topless women serve. ಅವರನ್ನು ಕಳುಹಿಸುತ್ತಿದ್ದಾರೆ, ಇದು

ದುಃಖಕರವಾದುದು. ನನಗೆ ಬಹಳ ದುಃಖವಾಗುತ್ತಿದೆ ಈ ಸಂದರ್ಭದಲ್ಲಿ ಹೇಳುವುದಕ್ಕೆ, ಈ ರೀತಿ ನಡೆಯುತ್ತಿರುವ ಸಂದರ್ಭದಲ್ಲಿ ಓದುತ್ತಿರತಕ್ಕ ಮಕ್ಕಳ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಈ ಸಭೆ ಗಂಭೀರವಾಗಿ ನೋಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು:- ಹೆಣ್ಣುಮಕ್ಕಳು ಕುಡಿಯುತ್ತಾರೆ ಎನ್ನತಕ್ಕ ಬಗ್ಗೆ ನಾನು ಏಕೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದೆ ಅಂದರೆ it has become more a fashion, a class indicator. ಕೆಲವರು ಅಶ್ಲೀಲವಾಗಿ ಅಕ್ರಮವಾಗಿ ಹಣ ಗಳಿಸಿ ರಾತ್ರೋ ರಾತ್ರಿ ತಮ್ಮ ಅಂತಸ್ತನ್ನು ಏರಿಸಿಕೊಂಡು ಬಹಳ ಮೇಲ್ವರ್ಗದವರು ಎಂದು ತೋರಿಸಿಕೊಳ್ಳುವಂತಹ ಆತುರ ಇರತಕ್ಕವರು ಈ ಅಭ್ಯಾಸವನ್ನು ಮಾಡಿಕೊಂಡಿದ್ದಾರೆ. ಇದು ಹೋಟೆಲ್ಸ್‌ನಲ್ಲಿ ಕ್ಲಬ್ಸ್‌ನಲ್ಲಿ ಅಂತ ಅಲ್ಲ. ನಾವು ಬಾರಿನ ಲೈಸೆನ್ಸ್ ಕ್ಯಾನ್ಸಲ್ ಮಾಡಿದರೆ ಅವರು ಕದ್ದು ಆದರೂ ತರಿಸಿಕೊಂಡು ಕುಡಿಯುತ್ತಾರೆ. ಅವರು ಸಿಗರೇಟ್ ಸೇದುವುದು, ಹೆಂಡ ಕುಡಿಯುವುದು ವಿಸ್ಕಿ, ಸ್ಕಾಚ್ ಅಂದರೂ ಅಷ್ಟೆ ಅದೆಲ್ಲ ಹೆಂಡನೇ, ಇದು ನಾವು ಬಹಳ ನಾಗರೀಕರಾಗಿದ್ದೇವೆ, ಬಹಳ ಮುಂದುವರಿದುಬಿಟ್ಟಿದ್ದೇವೆಂದು ತೋರಿಸಿಕೊಳ್ಳುವುದಕ್ಕೆ ಕೆಲವರಿಗೆ ಶೋಕಿ. ಕೆಲವು ಸ್ಕೂಲ್ಸ್‌ಗೆ ಸೇರಿಸುವುದು, ಡ್ರಿಂಕ್ಸ್ ತೆಗೆದುಕೊಳ್ಳುವುದು ಕೆಲವೆಲ್ಲ they have become class indicators. ಶ್ರೀಮಂತವರ್ಗದ ಸದಸ್ಯರು ನಾವು ಆಗಿದ್ದೇವೆಂದು ಇತರೆ ಸಮಾಜಕ್ಕೆ ಹೇಳುವುದಕ್ಕೆ ಅಣಕ ಮಾಡುವುದಕ್ಕೆ ಮಾಡುವಂತಹ ಕೆಲವು ಚೇಷ್ಟೆಗಳು ಇವು. It is that which is more important.

ಶ್ರೀ ಅರಗ ಜ್ಞಾನೇಂದ್ರ:- ರೇಸಿಗೆ ಹೋಗುವುದು ಕೂಡ ಅಷ್ಟೆ.

ಅಧ್ಯಕ್ಷರು:- ರೇಸಿಗೆ all sections of people will go.

ಶ್ರೀ ಎಂ.ಪಿ.ಪ್ರಕಾಶ್:- ಹೊಸ ನಿಯೋರಿಚ್ ಕ್ಲಾಸ್ ಈ ತರಹ ಅನುಕರಣಾಪ್ರಿಯರು.

ಶ್ರೀ ಕೆ.ಬಿ.ಶಾಣಪ್ಪ:- ಮಾನ್ಯ ಅಧ್ಯಕ್ಷರೆ, ಮದ್ಯಪಾನದ ಬಗ್ಗೆ ಏನು ಮಾತನಾಡುತ್ತಿದ್ದೇವೆ ಇದು ನಿನ್ನೆಯಿಂದಲೇ ಶುರುವಾಗಿದೆ. ನಿನ್ನೆ ರಾತ್ರಿ ಇಲ್ಲಿ 7 ಗಂಟೆಗೆ ಮುಗಿಯಿತು. ಮತ್ತೆ ರಾತ್ರಿ 11 ಗಂಟೆಯ ತನಕ ಮನೆಯಲ್ಲಿ ಚರ್ಚೆಯಾಯಿತು. ಆಮೇಲೆ ಇವತ್ತು ಮೇಲ್ಮನೆಯಲ್ಲಿ ಬೆಳಿಗ್ಗೆ 9 ಗಂಟೆಗೆ ಚರ್ಚೆಯಾಗಿ ಮತ್ತೆ ಈಗಲೂ ಅದೇ. ನಮ್ಮ ಗತಿ ಏನಾಗಿರಬೇಕು ಈ ಮದ್ಯದ ಮಧ್ಯದಲ್ಲಿ ಸಿಕ್ಕಿ?

ಅಧ್ಯಕ್ಷರು:- ನಿಮ್ಮ ಪುಣ್ಯ ನೋಡಿ ಯಾವ ತರಹದ ನಿಶಾ, ಹಗಲೂ ರಾತ್ರಿ ನಿಶಾದಲ್ಲಿ ಇದ್ದೀರಲ್ಲ.

ಶ್ರೀ ಎಸ್.ರಾಜೇಂದ್ರನ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಮೀಳ ನೇಸರ್ಗಿಯವರು

ಹೇಳಿದ್ದಾರೆ. ಹೆಣ್ಣುಮಕ್ಕಳು ಹೋಗಿ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಟಾಪ್‌ಕ್ಲಾಸ್ ವುಮನ್ ಸಪ್ಲೈ ಮಾಡುತ್ತಿದ್ದಾರೆಂದು ಹೇಳಿದರು. ಹೆಂಡ ಕುಡಿಯುವುದು ತಪ್ಪು ಅಂತ ಗೊತ್ತಾಗಿದೆ. Drinking alcohol is wrong. When you know it is dangerous to go to bar, where is the necessity to go there? ಚೆನ್ನಾಗಿ ಗೊತ್ತಿದೆ ಲೇಡೀಸ್ ಅಲ್ಲಿ ಹೋಗಿ ಕೆಲಸ ಮಾಡಬಾರದು ಎಂದು. ಹೋಗಿರುವವರೆಲ್ಲ ಲೇಡೀಸ್ ಅಲ್ಲವೇ? ಏಕೆ ಹೋಗಬೇಕು? They should stop. all women should join together. You have to instruct all the ladies not to go to 5 Star hotels and pubs and not to work there. ಫಸ್ಟ್ ಅದು ತೆಗೆದುಕೊಂಡು ಬರಬೇಕು. ಅದು ಬಂದರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು:- ಎಷ್ಟು ವಿಚಿತ್ರವಿರುತ್ತದೆಂದರೆ, ಮಾನ್ಯ ಪ್ರಮೀಳಾರವರೇ ಸ್ಟೋನ್ ಕಟ್ಟರ್ಸ್ ಇರುತ್ತಾರಲ್ಲ ಹೆಣ್ಯುಮಕ್ಕಳು. ಅಲ್ಲಿ ಗಂಡು ಹೆಣ್ಣು ಅನ್ನುವ ಬೇಧವಿಲ್ಲ. ಅವರೆಲ್ಲ ಕಲ್ಲು ಹೊಡೆದು ಜೀವನ ಮಾಡತಕ್ಕವರು. ಹೆಣ್ಣುಮಗು ಅಲ್ಲಿ ಅರ್ಯಾಕ್ ತೆಗೆದುಕೊಳ್ಳುತ್ತಾಳೆ. ಕೆಲವೇ ಗಂಟೆಗಳಲ್ಲಿ ಒಂದು ಮಗುವಿಗೆ ಜನ್ಮ ಕೊಡುತ್ತೇನೆ ಎನ್ನುವವರೆಗೂ ಅವಳು ಕಲ್ಲು ಹೊಡೆಯುತ್ತಲೇ ಇರುತ್ತಾಳೆ. ಆ ನೋವು ಪ್ರಾರಂಭವಾದಾಗ she stops the labour. She just delivers the baby ಒಂದು 2-3 ಗಂಟೆಗಳಲ್ಲಿ she consumes arrack. ಆಗತಾನೇ ಹುಟ್ಟಿದ ಸಣ್ಣ ಮಗುವಿಗೂ ಕೂಡ ಒಂದು ಚಮಚದಲ್ಲಿ ಒಂದೆರಡು ತೊಟ್ಟು ಅರ್ಯಾಕ್ ಹಾಕುತ್ತಾಳೆ. Next day she is back on the job. ಅದು ಒಂದು ವರ್ಗದ ಜನ. ಇನ್ನೊಂದು ವರ್ಗ ನಾನು ಹೇಳಿದವರು. ಬಡ್ಸ್ ಕ್ಲಬ್, ಸೆಂಚುರಿಕ್ಲಬ್‌ಗೆ, ಅಶೋಕಾಕ್ಕೆ, ಹಾಲಿ ಡೇ ಇನ್‌ಗೆ ಬಂದು ಕುಡಿಯತಕ್ಕವರು. This is more a class conflict. It is that which will have to be in our mind primarily and uppermost.

ಶ್ರೀ ವಾಟಾಳ್ ನಾಗರಾಜ್:- ಇಡೀ ಸಮಾಜದಲ್ಲಿ ಹೆಣ್ಣಿಗೆ ಒಂದು ಮಹತ್ತರವಾದ ಸ್ಥಾನವಿದೆ. ಮತ್ತೆ ಎಲ್ಲೊ ಅಲ್ಲಿ ಇಲ್ಲಿ ಯಾರೋ ಹೆಣ್ಣುಮಕ್ಕಳು ಮಾಡಿದರು. ಅಂದರೆ ಇದು ಹೆಣ್ಣಿನ ಕುಲಕ್ಕೆ ಎಲ್ಲವೂ ಅದೇ ರೀತಿ ಅನ್ನತಕ್ಕ ಮಾತು ನಾನು ಅದನ್ನು ಒಪ್ಪುವುದಿಲ್ಲ. ಅದು ಬಹಳ ಕಡಿಮೆ. ಸೌಭಾಗ್ಯವತಿ ಎಂದು ಏಕೆ ಕರೆಯುತ್ತೇವೆಂದು ಹೇಳಿದರೆ....

ಶ್ರೀಮತಿ ಪ್ರಮೀಳಾ ನೇಸರ್ಗಿ:- ಎಲ್ಲಾ ಹೆಣ್ಣುಮಕ್ಕಳು ಎಂದು ಸಭಾಧ್ಯಕ್ಷರು ಹೇಳಲಿಲ್ಲ. ತಾವು ದಯವಿಟ್ಟು ಆ ತರಹ ಎಕ್ಸ್‌ಪ್ಲೆನೇಷನ್ ಕೊಡಬೇಡಿ. ಆ ತರಹ ಅವರು ಹೇಳಲಿಲ್ಲ. ಅದರ ಕಡೆಗೆ ಗಮನ ಹರಿಸಿದರು.

ಡಾ: ಎಂ.ಶಂಕರನಾಯ್ಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):- ಮಾನ್ಯ

ಅಧ್ಯಕ್ಷರೆ, ತಾವು ಹೇಳತಕ್ಕ ರೀತಿ, ಇಲ್ಲಿ ಚರ್ಚೆ ಮಾಡತಕ್ಕ ರೀತಿ, you are a practical man. ಕೆಳಹಂತದಲ್ಲಿ ಸಮಾಜದಲ್ಲಿ ಏನು ನಡೆಯುತ್ತಿದೆ, ಮೇಲ್ವರ್ಗದ ಸಮಾಜದಲ್ಲಿ ಏನು ನಡೆಯುತ್ತಿದೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಇಲ್ಲಿ ಚರ್ಚೆ ಮಾಡತಕ್ಕವರು ಬರೀ ಮೇಲ್ವರ್ಗದ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತ್ರ ಹೇಳುತ್ತಿದ್ದಾರೆಯೇ ಹೊರತು ಕೆಳಮಟ್ಟದ ಜನ ತಾವು ಹೇಳಿದ ಹಾಗೆ ಕೂಲಿ ಮಾಡತಕ್ಕವರು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹೆಣ್ಣುಮಕ್ಕಳ ಪರಿಸ್ಥಿತಿಯೇನು ಎಂದು ಅವರಿಬ್ಬರಿಗೂ ಅರ್ಥವಾಗಿಲ್ಲವೆಂದು ನಾನು ಭಾವಿಸುತ್ತೇನೆ. ಪ್ರಾಕ್ಟಿಕಲ್ಲಾಗಿ ಏನಾದರೂ ಗೊತ್ತಿದ್ದರೆ What you say is correct.

SRI K.B.SHANAPPA:- from where we have come, what are the economic position and social problems - I hope that you could not understand properly. What is their social background? Where are they standing. What are his earnings?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಅದೆಲ್ಲ ಗೊತ್ತಿದ್ದರೆ ನಾವು ಶಂಕರಾಚಾರ್ಯರಾಗುತ್ತಿದ್ದೆವು. ನಾನು ಎಲ್ಲಿಂದ ಬಂದೆ ಎಲ್ಲಿಗೆ ಹೋಗುತ್ತೇನೆ ಎಂದು ತಿಳಿದುಕೊಂಡಿದ್ದರೆ ಅದು ಆಗುತ್ತಿತ್ತು. ಅಂತಹ ಹೈಯರ್ ಫಿಲಾಸಫಿ ಅಲ್ಲ. ನಾವು ಇನ್ನೂ ಈ ಭೂಲೋಕದಲ್ಲಿದ್ದೇವೆ. ಸಾಮಾಜಿಕ ಜನರ ಜೊತೆಯಲ್ಲಿ ಇದ್ದೇವೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಬಿ.ಶಾಣಪ್ಪ:- ಅವರು ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಿಂದ ಹೇಗೆ ಹೊರಬೇಕು ಅದನ್ನು ಯೋಚನೆ ಮಾಡಿ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಸಮಾಜದಲ್ಲಿರುತಕ್ಕಂಥ ಈ ಪರಿಸರವನ್ನು ಏನು ಸರ್ಕಾರ ನಿರ್ಮಾಣ ಮಾಡಿದೆ. ಪಾನ ನಿರೋಧ ತರದೆ ಅದರ ಬಗ್ಗೆ ನಾವು ಮಾತನಾಡುತ್ತಿದ್ದೇವೆ.

ಶ್ರೀ ಕೆ.ಬಿ.ಶಾಣಪ್ಪ:- ಸೋಶಿಯೋ ಎಕನಾಮಿಕ್ಸ್ ಪ್ರಾಬ್ಲಮ್ಸ್ ಹೇಗೆ ಫೇಸ್ ಮಾಡುತ್ತಾರೋ ಅವರ ಬಗ್ಗೆ ಚಿಂತನೆ ಮಾಡಲಿಕ್ಕೆ ತಾವು ಹತ್ತಿದ್ದೀರಿ. ಅವರ ಸೋಶಿಯಲ್ ಬ್ಯಾಕ್‌ಗ್ರೌಂಡ್ಸ್ ಏನು - where are they standing. What is his Jhopadi and what are his earnings. you think of them and then you talk about all these things.

ಶ್ರೀ ವಾಟಾಳ್ ನಾಗರಾಜ್:- ಆ ಜನರ ಪ್ರಾಣ, ಆರೋಗ್ಯ, ಅವರ ಜೀವನ ಉಳಿಯಲೆಂದೇ ಈ ಹೋರಾಟ. ಅದರ ಹಿನ್ನಲೆ ಇದೆ. ಅವರಿಗೆ ಏನೂ ಅರ್ಥವಾಗಿಲ್ಲ ಎಂದು ಶಂಕರನಾಯಕ್ ಅವರೂ, ನೀವೂ ಹೇಳಬೇಕಾಗಿಲ್ಲ. ತಾವು ಪ್ರಬುದ್ಧರು ಎಂದು

ನಮಗೆ ಗೊತ್ತಿದೆ. ತಾವು ನಮಗೆ ಅರ್ಥವಾಗಿಲ್ಲವೆಂದು ಹೇಳಬೇಡಿ. ನಮಗೂ ಗೊತ್ತಿದೆ. ನೀವು ಬಹಳ ಕೆಳಗಿನಿಂದ ಬಂದವರು, ನಾವು ಏನೋ ಆಕಾಶದಲ್ಲಿರುವವರು ಎನ್ನುವ ರೀತಿಯಲ್ಲಿ ವಾದ ಮಾಡುವುದು ಬೇಡ. ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಯಾರು ಧ್ವನಿ ಇಲ್ಲದವರು, ಯಾರು ಸಾಮಾನ್ಯ ಜನರು ಇದ್ದಾರೆ ಅವರ ಬಗ್ಗೆ ನಾವು ಹೋರಾಟ ಮಾಡಿಕೊಂಡು ಬಂದಿರುವವರು. ಅದರ ಬಗ್ಗೆ ನಮಗೆ ನಿಮ್ಮ ಬುದ್ಧಿವಾದ ಬೇಕಾಗಿಲ್ಲ. ಅದರ ಬಗ್ಗೆ ನೀವು ನಮಗೆ ಬುದ್ಧಿ ಹೇಳುವುದು ಬೇಡ. ನಾವು ಹಳ್ಳಿಯಿಂದ ಗೆದ್ದುಬಂದಿದ್ದೇವೆ, ಗಲ್ಲಿಯಿಂದ ಗೆದ್ದಿದ್ದೇವೆ. ಬೀದಿಯಲ್ಲಿರತಕ್ಕಂಥ ಜನ ನಮಗೆ ಓಟು ಕೊಟ್ಟಿದ್ದಾರೆ.

ಅಧ್ಯಕ್ಷರು:- ಎಕ್ಸ್ಯಾಟ್ ಆಗುವುದು ಬೇಡ. ಅವರ ಅಭಿಪ್ರಾಯ ಹೇಳಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಅವರು ತಮ್ಮ ಅಭಿಪ್ರಾಯ ಕೊಡತಕ್ಕಂಥ ಸಂದರ್ಭದಲ್ಲಿ ಹಳ್ಳಿಗಾಡಿನ ಹೆಣ್ಣುಮಕ್ಕಳ ಪರಿಸ್ಥಿತಿ ನಮಗೆ ಗೊತ್ತಿಲ್ಲ ಎನ್ನತಕ್ಕಂಥ ಮಾತು ಹೇಳುವುದು ಬೇಕಾಗಿಲ್ಲ. ಇಡೀ ಹಳ್ಳಿಗಾಡನ್ನೆಲ್ಲ ನಾವು ನೋಡಿಕೊಂಡು ಬಂದಿದ್ದೇವೆ. ಹೆಣ್ಣುಮಕ್ಕಳು ಏನೇನು ತೊಂದರೆ ಅನುಭವಿಸುತ್ತಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ, ಕಣ್ಣಾರೆ ಕಂಡಿದ್ದೇವೆ.

ಡಾ: ಎಂ.ಶಂಕರನಾಯಕ್:- ನಾನು ಮಾತನಾಡುವಾಗ....

(ಗೊಂದಲ)

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ:- ಕೆಳಗೆ ಬಿದ್ದಂಥ ಈ ಜನರ ಸಲುವಾಗಿ....

ಅಧ್ಯಕ್ಷರು:- ಆ ಜನರ ಸಲುವಾಗಿ. ನೀವು ಪಾನ ನಿಷೇಧ ಮಾಡಿಯೆಂದು ಹೇಳಿಬಿಟ್ಟು ಅವರಿಗೆ ತಮಟೆ ತೆಗೆದುಕೊಂಡು ಬಂದು ಬಾರಿಸಿ ಅಂತ ಹೇಳಿದರೆ? ನಾನು ಹೇಳುತ್ತೇನೆ, ಅವರು ಕುಡಿಯುವುದಾದರೆ ಕುಡಿದುಕೊಳ್ಳಲಿ. ಆದರೆ ತಮಗೆ ಬಾರಿಸುವುದಕ್ಕೆ ಅವರು ಬರಬಾರದು. ಯಾವತ್ತೋ ಸತ್ತ ದನದ ತೊಗಲಿನಲ್ಲಿ ತಮಟೆ ಮಾಡಿಸಿ ನಾವು ಕುಷಿ ಪಡುವುದಕ್ಕೆ ಅವರನ್ನು ಬಂದು ತಮಟೆ ಬಾರಿಸಿ ಎಂದು ಅವರ ಎದುರಿಗೆ ಹೇಳುತ್ತೇವೆ. ಅದು ಮಾತ್ರ ಆಗಬಹುದು. ಇದು ಆಗಬಾರದಾ? ಅವರಿಗೆ ಸೋಶಿಯಲ್ ಸ್ಟೇಟಸ್ ಕೊಡುವುದರ ಬಗ್ಗೆ ನಾವು ಯೋಚನೆ ಮಾಡಬೇಕು.

ಡಾ: ಎಂ.ಶಂಕರನಾಯಕ್: ಅದನ್ನು ನಾವು ವಿಚಾರ ಮಾಡಬಹುದು. ಅವರು ಯಾವ ಕಷ್ಟದಲ್ಲಿದ್ದಾರೆ.....

ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ:- ಇದು ಚರ್ಚೆಯಾಗಲಿ. ಆದರೆ ಅನಾವಶ್ಯಕ ಚರ್ಚೆ ಬೇಡ. ಇದನ್ನು ಕ್ಲೋಸ್ ಮಾಡೋಣ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ನಮ್ಮ ಧರ್ಮಸಿಂಗ್ ಅವರು ಬಹಳ ಸೀರಿಯಸ್ ಇದ್ದಾರೆ. 12-30ಕ್ಕೆ ತಾವು ಗಡವು ಕೊಟ್ಟಿದ್ದೀರಿ. ಈಗ ಒಂದು ವೇಳೆ ನೀವು ಅನೌನ್ಸ್ ಮಾಡದೇ ಹೋದರೆ

ಅವರು ಧರಣಿ ಕೂಡುವವರಿದ್ದಾರೆ. ಆದ್ದರಿಂದ ದಯವಿಟ್ಟು ಅದನ್ನು ಬೇಗನೇ ಅನೌನ್ಸ್ ಮಾಡಿಸಿ.

ಅಧ್ಯಕ್ಷರು:- ಬೇಡ. ನೀವು ನೂರು ಸಲ ಬೇಕಾದರೆ ಕೂಡಿ. ಆದರೆ ಧರ್ಮಸಿಂಗ್ ಅವರಿಗೆ ಮಾತ್ರ ನಾನು ಧರಣಿ ಕೂಡುವುದಕ್ಕೆ ಬಿಡುವುದಿಲ್ಲ. ನಾನು ಅವರ ಅಭಿಮಾನಿ.

ಶ್ರೀ ಧರ್ಮಸಿಂಗ್:- ಇಲ್ಲ, ಅವರು ಹೋದರೆ ಅವರ ಜೊತೆಗೆ ನಾನೂ ಹೋಗಬೇಕಾಗುತ್ತದೆ.

ಅಧ್ಯಕ್ಷರು:- ನಾನು ಪರಿಸ್ಥಿತಿ ಆ ಮಟ್ಟಕ್ಕೆ ಹೋಗಲಾರದಂತೆ ಮಾಡುತ್ತೇನೆ. ತಾವು ಮಾತನಾಡುತ್ತೀರಿ. ನಾನು ಲಾ ಮಿನಿಸ್ಟರ್‌ಗೆ ಹೇಳಿಕಳಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್:- ಸಾಮಾಜಿಕ ನ್ಯಾಯದ ಬಗ್ಗೆ ಚರ್ಚೆ ಅದು ಒಂದು ದಿಕ್ಕು ತಲುಪುತ್ತದೆ. ಯಾರು ಏನು ಮಾಡಬೇಕು ಎನ್ನುವುದರ ಬಗ್ಗೆ, ಯಾರು ಏನು ಕಸುಬು ಮಾಡಬೇಕು ಎಂದು ಅದು ಕಸುಬಿನ ಮೇಲೆ ನಿರ್ಧಾರವಾಗುವುದಿಲ್ಲ. ಇದು ಬೇರೆ ಬದಲಾವಣೆ ಆಗಬೇಕಾಗುತ್ತದೆ. ಅದರ ರೂಪವೇ ಬದಲಾವಣೆಯಾಗಬೇಕಾಗುತ್ತದೆ. ಪಾನನಿರೋಧ ಜಾರಿಗೆ ತರುವುದರಿಂದ ಸಮಾಜದಲ್ಲಿ ಯಾರು ತುಳಿತಕ್ಕೆ ಸಿಕ್ಕಿದ್ದಾರೆ ಆ ಜನರ ಆರೋಗ್ಯ, ಸಾಮಾಜಿಕ ನ್ಯಾಯ, ಆ ಜನರ ಪರಿಸರ, ಇದರ ಬಗ್ಗೆ ಹೆಚ್ಚಿನ ಶಕ್ತಿ ಬರುತ್ತದೆ, ಗೌರವ ಬರುತ್ತದೆ. ಆ ದಿಕ್ಕಿಗೂ ನಾವು ಹೋಗಬೇಕಾಗುತ್ತದೆ. ಮಹಿಳೆಯರು ಇದನ್ನು, ಈ ಚಳುವಳಿಯನ್ನು ಕೈಗೆತ್ತಿಕೊಳ್ಳಬೇಕು. ಅವರು ಯಾವುದೇ ಪಕ್ಷದವರಾಗಿರಲೀ, ಏನೇ ಇರಲಿ, ನಾನು ಆಗಲೇ ಪ್ರಾರಂಭದಲ್ಲಿ ಹೇಳಿದ ರೀತಿಯಲ್ಲಿ ಮದುವೆಯಾಗಬೇಕಾದರೆ ಒಂದು ಷರತ್ತು ಇರಬೇಕು. ಮದುವೆಯಾಗತಕ್ಕಂಥ ಗಂಡು ಪ್ರಾಮಾಣಿಕವಾಗಿ ಈ ಪಾನನಿರೋಧಕ್ಕೆ ಬದ್ಧನಾಗಿರಬೇಕು. ಅದು ನಿಜವಾಗಿಯೂ ಒಂದು ಸಾಮಾಜಿಕ ನ್ಯಾಯ. ಸಂಸಾರದಲ್ಲಿ ಗಂಡು ಕುಡುಕನಾದರೆ ಸಂಸಾರ ಸಾರ ಇಲ್ಲದ ಹಾಗೆ ಆಗುತ್ತದೆ. ಇದರ ಬಗ್ಗೆ ನಾವು ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು. ಇದಕ್ಕೆ ಮೊದಲನೇ ಚಳುವಳಿ, ಈ ದೇಶಕ್ಕೆ ಮಾದರಿಯಾಗಿ ಕರ್ನಾಟಕ ರಾಜ್ಯದಲ್ಲಿ ಮಹಿಳೆಯರೇ ಮುಂದೆ ಬರಲಿ. ಮಹಿಳೆಯರು ಸಮಗ್ರವಾಗಿ ಕರ್ನಾಟಕ ರಾಜ್ಯದ ನನ್ನ ಅಕ್ಕತಂಗಿಯರು, ತಾಯಂದಿರು, ಮಹಿಳೆಯರು ಬೀದಿಗೆ ಬರಲಿ. ಯಾರು ಕುಡುಕ ಗಂಡ ಇದ್ದಾರೆ ಅವನನ್ನು ಮನೆಯಿಂದ ಹೊರಹಾಕಿ ಅಲ್ಲಿಂದ ಚಳುವಳಿ ಶುರುವಾಗಲಿ. ಯಾರು ಕುಡುಕ ಗಂಡ ಮನೆಯಲ್ಲಿ ತನ್ನ ದರ್ಪ, ಪ್ರತಾಪಗಳನ್ನು ತೋರಿಸಿ ಇಡೀ ಸಂಸಾರಕ್ಕೆ ಹೊರೆಯಾಗತಕ್ಕಂಥ ಪರಿಸ್ಥಿತಿ ಏನಿದೆ, ಅವನನ್ನು ಅವನ ಧರ್ಮಪತ್ನಿ ಹೊರಹಾಕಲಿ. ಮಹಿಳೆಯರಿಂದ ಆದರ್ಶವಾಗಲಿ. ಮಹಿಳಾಕುಲ ಇದಕ್ಕೆ ದಾರಿ ದೀಪವನ್ನು ನೀಡಲಿ. ಶಕ್ತಿಯನ್ನು ಕೊಡಲಿ ಎನ್ನುವ ದೃಷ್ಟಿಯಲ್ಲಿ ನಾನು ಮಹಿಳೆಯರನ್ನು ಅತ್ಯಂತ ಪ್ರಾಮಾಣಿಕವಾಗಿ ಎತ್ತರಕ್ಕೆ ತೆಗೆದುಕೊಂಡು ಹೋಗಿ ಈ ರಾಜ್ಯದಲ್ಲಿ ಮಹಿಳೆಯರಿಂದಲೇ ಈ ಚಳುವಳಿ ಶುರುವಾಗಲಿ ಎಂದು ಹೇಳುತ್ತೇನೆ. ಏನು ಚಳುವಳಿಗೆ ಬಂದಂಥ ಮಠಾಧಿಪತಿಗಳು

ಅವರು ಬರೀ ಪಾನನಿಶೇಧದ ಬಗ್ಗೆ ಮಾತ್ರ ಚಳುವಳಿ ಮಾಡುತ್ತಾರೆ ಎನ್ನತಕ್ಕದ್ದಕ್ಕಿಂತ ತಾವು ಹೇಳಿದ ಒಳಾರ್ಥಗಳಲ್ಲಿ ನಾನು ಅದಕ್ಕೆ ಸ್ಪಂದಿಸುತ್ತೇನೆ. ನಿಜ, ಸಾಧುಸಂತರು ಅವರು ಮಾಡತಕ್ಕಂಥ ವಿಚಾರದಲ್ಲಿ, ಅದರ ಹಿನ್ನೆಲೆಯಲ್ಲಿ ಚರ್ಚೆಗೆ ಹೋದರೆ ಅದು ಭಾರಿ ಚರ್ಚೆಯಾಗುತ್ತದೆ. ಕೊನೆಗೆ ನಾವು ನೆಮ್ಮದಿಯಾಗಿ ಚುನಾವಣೆಗೆ ನಿಲ್ಲುವಹಾಗಿಲ್ಲ. ಇಲ್ಲಿ ಮುಕ್ತ ಚರ್ಚೆಗೆ ಅವಕಾಶ ಇದೆ. ಆದರೆ ಕೆಲವು ವಿಚಾರಗಳು ಚರ್ಚೆಗೆ ಹೋಯಿತು ಎಂದರೆ ನಾವು ಚುನಾವಣೆಯಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ. ಈ ಸಮಾಜದಲ್ಲಿ ಈ ರೀತಿಯ ದಿಕ್ಕು ತಲುಪಿದೆ, ಆ ರೀತಿ ವ್ಯವಸ್ಥೆ ತಲುಪಿದೆ. ಕೆಲವು ಸಾರಿ ಅಂತಹವರ ಬಗ್ಗೆ ಮಾತನಾಡುವುದಕ್ಕೆ ಹೋದರೆ ನಮ್ಮ ಸಮಾಜದಲ್ಲಿ ಒಂದು ರೀತಿ ಕೆಳದರ್ಜೆಯಲ್ಲಿ ಕಾಣತಕ್ಕಂಥಾ ಪರಿಸ್ಥಿತಿಯನ್ನು ಅನೇಕರು ಅನುಭವಿಸಿರತಕ್ಕಂಥ ನಿದರ್ಶನ ಇದೆ. ಆದರೂ ಚಿಂತೆಯಿಲ್ಲವೆಂದು ಮಾತನಾಡುವುದಕ್ಕೆ ಹೋದರೆ ಅದು ಒಂದು ಹೊಸ ದಿಕ್ಕಿಗೆ ತಲುಪುತ್ತದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಈ ನಿಶೆ ಅಥವಾ ನಿಶಾ, ಅಮಲು ಅನೇಕ ದಿಕ್ಕಿನಲ್ಲಿದೆ. ತಮ್ಮ ನೋವು ನನಗೆ ಅರ್ಥವಾಗಿದೆ. ಅನೇಕ ಸಮಾರಂಭಗಳಲ್ಲಿ ತಾವು ಈ ಮಾತನ್ನು ಹೇಳಿದ್ದೀರಿ. ಇದು ಒಂದು ದಿಕ್ಕು. ಆದರೆ ಪಾನವನ್ನು ಸೇವಿಸುವುದರಿಂದ ಮನುಷ್ಯನ ಇಡೀ ಶಕ್ತಿ, ಆರೋಗ್ಯ, ಜೀವನ, ಅವರ ಪರಿಸರ, ಇದೆಲ್ಲಕ್ಕಿಂತ ಹೆಚ್ಚಾಗಿ ಅದು ನಾಶವಾಗುತ್ತದೆ. ಅದು ಮನುಷ್ಯನ ಆರೋಗ್ಯವನ್ನು ಕೆಡಿಸಿ, ಅವನ ದಿಕ್ಕನ್ನು ಬದಲಾವಣೆ ಮಾಡಿ ಮಾನವ ಕುಲಕ್ಕೇ ಮಾರಕವಾದಂಥ ಈ ಪಾನವನ್ನು, ಮದ್ಯಪಾನವನ್ನು ನಿಶೇಧ ಮಾಡತಕ್ಕಂಥ ಒಂದು ರೂಪ, ಒಂದು ದಿಕ್ಕು ಇವತ್ತು ನಾವು ಮಾಡಲೇ ಬೇಕಾಗುತ್ತದೆ. ಇದರ ಬಗ್ಗೆ ಬಹಳ ಜನ ಬೆಂಬಲ ಕೊಡದೇ ಇರಬಹುದು. ಬಹಳ ಜನ ಚಳುವಳಿಗೆ ಬರದೇ ಇರಬಹುದು. ಆದರೆ ಅಭಿಪ್ರಾಯವನ್ನು ಮೂಡಿಸುವುದಕ್ಕೆ ಇದೇ ಸಣ್ಣ ಚಳುವಳಿ, ಮುಂದೆ ಜ್ವಾಲೆಯಾಗಿ ಬೆಳೆಯತಕ್ಕಂಥ ಪರಿಸ್ಥಿತಿಯಾಗುತ್ತದೆ. ಆದ್ದರಿಂದ ಮಹಿಳೆಯರ ಬಗ್ಗೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮಹಿಳೆಯರು ಸಮಗ್ರವಾಗಿ ಇದರಲ್ಲಿ ಪ್ರಧಾನಪಾತ್ರವನ್ನು ಏಕೆ ವಹಿಸಬೇಕು ಎಂದರೆ ಇದರ ಬಗ್ಗೆ ಅವರಿಗೆ ಕಾಳಜಿ ಇದೆ. ಮಹಿಳೆಯರು ಕೆಲವು ಕಡೆ ತೆಗೆದುಕೊಳ್ಳಬಹುದು, ಮಾಡುತ್ತಾರೆ ಎನ್ನತಕ್ಕಂಥ ಚಿಂತನೆ ಏನಿದೆ, ಅದು ಗೌಣ. ಅದು ಸಣ್ಣ ವಿಚಾರ. ಆದರೆ ಒಟ್ಟಾರೆ ತೆಗೆದುಕೊಂಡಾಗ ಮಹಿಳೆಯರ ನಾಯಕತ್ವ ಇದಕ್ಕೆ ಪ್ರಾಮಾಣಿಕವಾಗಿ ಬೇಕು ಎಂಬುದರಲ್ಲಿ ನನ್ನ ಎರಡನೇ ಅಭಿಪ್ರಾಯ ಇಲ್ಲ. ಸ್ವಾಮಿ, ಇದು ಒಂದು ಪ್ರಶ್ನೆ. ನಾವು ಅನೇಕ ರಾಜ್ಯಗಳನ್ನು ನೋಡಿದಾಗ, ಪಾನನಿರೋಧವನ್ನು ತಂದಂಥ ರಾಜ್ಯದಲ್ಲಿ ಪರಿಸ್ಥಿತಿ ಏನು, ಪಾನ ನಿರೋಧವನ್ನು ತಂದರೆ ನಮ್ಮ ರಾಜ್ಯದ ಪರಿಸ್ಥಿತಿ ಏನು? ಇದರಲ್ಲಿ ಎರಡು-ಮೂರು ದಿಕ್ಕುಗಳಾಗಿ, ಎರಡು-ಮೂರು ಭಾಗಗಳಾಗಿ ನಾವು ಚಿಂತನೆಯನ್ನು ಮಾಡಬೇಕು. ಒಂದು ಸರ್ಕಾರದ ಖಜಾನೆಗೆ ಬರತಕ್ಕಂಥ ಹಣದ ಪರಿಸ್ಥಿತಿ. ಎರಡನೆಯದು, ಈ ಹಣ ಬರುವುದನ್ನು ತಪ್ಪಿಸಿದರೆ ನಮ್ಮ ಸರ್ಕಾರದ ಆಡಳಿತ ಪರಿಸ್ಥಿತಿ. ಮೂರನೆಯದು, ಸಂಪೂರ್ಣ ಪಾನನಿರೋಧ ತಂದರೆ ಇದಕ್ಕೆ ವಿರುದ್ಧವಾಗಿ ಕಳ್ಳಭಟ್ಟಿ ನಿರ್ಮಾಣ

ಆಗತಕ್ಕಂಥಾದ್ದು ಎನ್ನುವ ಒಂದು ಪರಿಸ್ಥಿತಿ. ಇದೆಲ್ಲದರ ಬಗ್ಗೆ ಸಮಗ್ರವಾದ ಚಿಂತನೆ ನಡೆಯಬೇಕು. ನಿಜ, ಇಲ್ಲಿ ಕಳ್ಳಭಟ್ಟಿ ಸೇವನೆಯಿಂದ ನಮ್ಮ ಕರ್ನಾಟಕದಲ್ಲಿ ಕೋಲಾರಕ್ಕೆ ಹೋಗತಕ್ಕಂಥ ರಸ್ತೆಯಲ್ಲಿ ಯಾವುದೋ ಒಂದು ಪ್ರಕರಣದಲ್ಲಿ 80 ಜನ ಸತ್ತರು. ಅದೇ ಪ್ರಕಾರ ಅನೇಕ ಕಡೆ ಜನ ಸತ್ತಿದ್ದಾರೆ, ಇಲ್ಲ ಎನ್ನತಕ್ಕಂಥ ಪ್ರಶ್ನೆ ಬೇರೆ. ನನಗನ್ನಿಸುತ್ತದೆ, ಈ ಒಂದು ವ್ಯವಸ್ಥೆ, ಈ ಸಾಮಾಜಿಕ ಪಿಡುಗಿನಿಂದ, ತಮ್ಮ ವಾಕ್ಯದಲ್ಲಿ ತಾವು ಹೇಳುತ್ತೀರಿ ಸಾಮಾಜಿಕ ಪಿಡುಗು ಬರೀ ಇದು ಒಂದರಲ್ಲೇ ಇದೆಯೇ ಎಂದು.

ನಿಜ, ಇದೊಂದೇ ಎನ್ನುವುದನ್ನು ನನ್ನ ವಾದದಲ್ಲಿ ಒಪ್ಪದೇ ಇದ್ದರೂ, ಪರಿಣಾಮಕಾರಿಯಾಗಿ ಇದು ಅಪಾಯ. ಇದು ಅಪಾಯಕಾರಿ ಮನೋಭಾವನೆ ಇರತಕ್ಕಂಥ ಒಂದು ವಸ್ತು. ನಾನು ಆ ದೃಷ್ಟಿಯಿಂದ ಈ ಪಾನನಿರೋಧವನ್ನು ಜಾರಿಗೆ ತರುವುದರಿಂದ ಎಷ್ಟು ಅನುಕೂಲಗಳು, ಪಾನವನ್ನು ಸೇವಿಸುವುದರಿಂದ ಎಷ್ಟು ಅನುಕೂಲಗಳು ಇವೆ ಎನ್ನುವುದರ ಬಗ್ಗೆ ನಾವು ದೀರ್ಘವಾಗಿ ಚರ್ಚೆ ಮಾಡಿದಾಗ ನನಗನಿಸುತ್ತದೆ ಅಧ್ಯಕ್ಷರೇ, ಪರಿಸರ.....

ಅಧ್ಯಕ್ಷರು:- ಒಂದು ಕೆಲಸ ಮಾಡೋಣ. ಇದನ್ನು ಜೀವಂತ ಇಟ್ಟಿರೋಣ. ಏಕೆಂದರೆ, ಇವತ್ತು ಬಹಳ ಜನ ಸದಸ್ಯರುಗಳು ಊರಿಗೆ ಹೋಗುವವರಿದ್ದಾರೆ. ಮತ್ತೆ ಮುಂದಿನ ಶುಕ್ರವಾರ ಇದನ್ನು ತೆಗೆದುಕೊಳ್ಳೋಣ. ತಾವು ಸಹಕರಿಸಿದರೆ, ತಮ್ಮ ಭಾಷಣವನ್ನು ಮುಂದಿನ ಶುಕ್ರವಾರ ಮುಂದುವರಿಸೋಣ.

ಶ್ರೀ ವಾಟಾಳ್ ನಾಗರಾಜ್:- ಆಗಬಹುದು.

ಅಧ್ಯಕ್ಷರು:- ಇದು ಬಹಳ ಮುಖ್ಯವಾದ ವಿಚಾರ ಆಗಿರುವುದರಿಂದ, ಟೈಮ್ ಕಡಿಮೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ, ಈಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು, ಜೇವರ್ಗಿ ಚುನಾವಣೆ ವಿಚಾರಕ್ಕೆ ಹೇಳಿಕೆ ಕೊಡಬೇಕು.

ಮಂತ್ರಿಗಳ ಹೇಳಿಕೆ.

ವಿಷಯ:- ಜೇವರಗಿಯ ಪಂಚಾಯತಿ ಚುನಾವಣೆಯಲ್ಲಿ ಮೀಸಲಾತಿಯ ಬದಲಾವಣೆ.

+ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಮಾನ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಧರ್ಮಸಿಂಗ್‌ರವರು ಜೇವರ್ಗಿ ಮತ್ತು ಅಫ್ಜಲ್‌ಪುರ ಟೌನ್ ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಮೀಸಲಾತಿಯನ್ನು ಕೊಟ್ಟಿರತಕ್ಕಂಥ ಅಧಿಸೂಚನೆಯನ್ನು ತಾವು ಏಕಾಏಕಿಯಾಗಿ ಬದಲಾವಣೆ ಮಾಡಿದ್ದೀರಿ ಮತ್ತು ಚುನಾವಣೆಯನ್ನು ಮುಂದೂಡಿದ್ದೀರಿ ಎಂಬತಕ್ಕಂಥ ವಿಚಾರವನ್ನು ಹೇಳಿದರು. ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಕಡತವನ್ನು ತರಿಸಿ ನೋಡಿದ್ದೇನೆ. ನಿಜ, ಸ್ವಲ್ಪಮಟ್ಟಿಗೆ ಇದನ್ನು ಮಾಡಲಿಕ್ಕೆ ಇರತಕ್ಕಂಥ ಕಾರಣ, ಆ